28 January 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 84 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಬೇಗ ಜಾಗೃತಗೊಳ್ಳುವುದು ತುಂಬಾ ಉತ್ತಮ! ಅದು ಭ್ರಮೆಯಿಂದಾಗಲಿ ಅಥವಾ ಅಹಂನಿಂದಾಗಲಿ!

-ಸ್ನೇಹಾ ಆನಂದ್



ಸಂವಿಧಾನ ಬದುಕು ಕಟ್ಟುವ ಮಹಾನ್ ಗ್ರಂಥ: ಸಚಿವ ರಾಮಲಿಂಗಾರೆಡ್ಡಿ ಪುಟ ಸಂ. 2



ಹೂಣಕನಪುರ ಗ್ರಾಮದ ಓಂಕಾರ್ ಸಿದ್ದೇಶ್ವರಸ್ವಾಮಿ ರಥೋತ್ಸವ ಪುಟ ಸಂ. 2



ಹೇಮಗಿರಿಯ ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿ ಬ್ರಹ್ಮರಥೋತ್ಸವ ಪುಟ ಸಂ. 4

# 6 ಸಾವಿರ ಗ್ರಾಪಂಗೆ ಗಾಂಧಿ ಹೆಸರು

## ಬಜೆಟ್‌ನಲ್ಲಿ ಅಧಿಕೃತ ಘೋಷಣೆ | ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು:** ರಾಜ್ಯದ 6 ಸಾವಿರ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮಗಾಂಧಿ ಹೆಸರನ್ನು ಇಡಲಾಗುವುದು. ಮುಂದಿನ ಬಜೆಟ್‌ನಲ್ಲಿಯೇ ಅಧಿಕೃತ ಘೋಷಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ವಿಬಿ ಜಿ ರಾಮ್ ಜಿ ಕಾಯ್ದೆ ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು. ಗಾಂಧೀಜಿ ಅವರನ್ನು ಆರ್‌ಎಸ್‌ಎಸ್‌ನ ನಾಥುರಾಮ್ ಗೋಡ್ಸೆ ಕೊಂದ. ಈಗ ಆರ್‌ಎಸ್‌ಎಸ್ ಪ್ರೋತ್ಸಾಹದಿಂದಲೇ ಎರಡನೇ ಬಾರಿಗೆ ಬಿಜೆಪಿ ಹತ್ಯೆ ಮಾಡಿದೆ ಎಂದು ವಾಗ್ದಾಳಿ ನಡೆಸಿದರು.

ಗಾಂಧೀಜಿ ಅವರ ಶ್ರಮ ಸಂಸ್ಕೃತಿಯ ರೂಪದಂತಿರುವ ಮನರೇಗಾ ಯೋಜನೆ ರದ್ದುಪಡಿಸಿ ಹೊಸ ಕಾಯ್ದೆ ತರಲು ಬಿಡುವುದಿಲ್ಲ. ಗಾಂಧೀಜಿ ಅವರ ಹೆಸರನ್ನು ಪಂಚಾಯಿತಿಗಳಿಗೆ ಇಡುತ್ತೇವೆ. ಇದೇ ವಿಚಾರವಾಗಿ ಚರ್ಚಿಸಲು ವಿಶೇಷ ಅಧಿವೇಶನ ಕರೆದಿದ್ದೇವೆ. ಹೊಸ ಕಾಯ್ದೆ ವಿರುದ್ಧ ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದರು.

ಈ ಹಿಂದೆ ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳಿಗೆ ತಿದ್ದುಪಡಿ ತಂದಾಗ ರೈತರು ಹೋರಾಟ ಮಾಡಿದ್ದರಿಂದ ವಾಪಸ್ ಪಡೆಯಲಾಯಿತು. ಈಗ ಕಾರ್ಮಿಕರು, ರೈತರೊಂದಿಗೆ ಸೇರಿ ಕಾಯ್ದೆ ಹಿಂಪಡೆಯುವವರೆಗೂ ಹೋರಾಟ ನಿಲ್ಲಿಸೋಲ್ಲ ಎಂದು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ, ಗ್ರಾಮ ಪಂಚಾಯಿತಿಗಳೇ ಉದ್ಯೋಗ ಬೇಡಿಕೆ ಆಧರಿಸಿ ಯೋಜನೆ ರೂಪಿಸಿ ವಾರ್ಷಿಕ ಅನುದಾನ ಪಡೆಯಬಹುದಿತ್ತು. ಪುಟ 2ಕ್ಕೆ



### ಡಿಕೆಶಿಗೆ ಪೇಟ ಕಟ್ಟಿದ ಸಿದ್ದು!

**ಬೆಂಗಳೂರು:** ಫ್ರೀಡಂ ಪಾರ್ಕ್‌ನಲ್ಲಿ ಜಿ ರಾಮ್ ಜಿ ಯೋಜನೆ ವಿರೋಧಿಸಿ ಕಾಂಗ್ರೆಸ್ ನಡೆಸುತ್ತಿರುವ ಪ್ರತಿಭಟನೆ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್ ತಲೆಗೆ ಸಿಎಂ ಸಿದ್ದರಾಮಯ್ಯ ಟವೆಲ್‌ನಲ್ಲಿ ಪೇಟ ಕಟ್ಟಿದರು.

ಹೆಗಲ ಮೇಲೆ ಇದ್ದ ಟವೆಲ್ ಅನ್ನು ಮೊದಲು ಸಿಎಂ ಸಿದ್ದರಾಮಯ್ಯ ಅವರು ತಲೆಗೆ ಕಟ್ಟಿಕೊಂಡರು. ಸುರ್ಜೇವಾಲ ಅವರು ಸಹ ತಲೆಗೆ ಟವೆಲ್ ಸುತ್ತಿಕೊಂಡರು. ಬಳಿಕ ಭಾಷಣ ಮುಗಿಸಿ ಬಂದ ಡಿಕೆಶಿ ಅವರ ತಲೆಗೆ ಸುರ್ಜೇವಾಲ ಅವರು ಟವೆಲ್ ಸುತ್ತಿದರು. ಅದು ಸರಿಯಾಗಿ ನಿಲ್ಲದ ಕಾರಣ ಸಿಎಂ ಸಿದ್ದರಾಮಯ್ಯ ಅವರು ನಗುನಗುತ್ತಲೆ ಸರಿಯಾಗಿ ಡಿಸಿಎಂ ತಲೆಗೆ ಟವೆಲ್ ಸುತ್ತಿದರು. ತಲೆಗೆ ಟವೆಲ್ ಕಟ್ಟಿಕೊಂಡು ಎದ್ದು ಮೂವರು ನಾಯಕರು ಪೋಸ್ ನೀಡಿದರು.

### ಎಚ್‌ಡಿಕೆಗೆ ಡಿಕೆಶಿ ಸವಾಲು



ನರೇಗಾ ಯೋಜನೆ ಮತ್ತು ಬಿಜೆಪಿ ಜಾರಿ ಮಾಡಿರುವ ಜಿ ರಾಮ್ ಜಿ ಯೋಜನೆ ಬಗ್ಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಬಿಜೆಪಿ ನಾಯಕರು ಚರ್ಚೆಗೆ ಬರಲಿ. ನಾನು ಅವರಿಗೆ ಉತ್ತರಿಸಲು ಸಿದ್ಧನಿದ್ದೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಸವಾಲು ಹಾಕಿದರು.

ನರೇಗಾ ಯೋಜನೆ ಜಾರಿಯಾಗಿ 20 ವರ್ಷಗಳಿವೆ. ಕಳೆದ 11 ವರ್ಷಗಳಿಂದ ನಿಮ್ಮದೇ ಸರ್ಕಾರ ಅಧಿಕಾರದಲ್ಲಿದೆ. ಈ ಯೋಜನೆಯಲ್ಲಿ ಅಕ್ರಮ ನಡೆದಿದ್ದರೆ ನೀವು ಏನು ಮಾಡುತ್ತಿದ್ದಿರಿ? ನಮ್ಮ ಪಂಚಾಯ್ತಿಗಳಲ್ಲಿ ಅಕ್ರಮ ನಡೆದ ಪ್ರಕರಣಗಳಲ್ಲಿ ನಾವು ಕ್ರಮ ಕೈಗೊಂಡಿದ್ದೇವೆ. ಯಾರೋ ಕೆಲವರು ತಪ್ಪು ಮಾಡಿದರೆ ಇಡೀ ಯೋಜನೆಯನ್ನೇ ಬದಲಿಸುವುದೇ? ಆಮೂಲಕ ಮೂಗು ಕತ್ತರಿಸಿಕೊಳ್ಳುವ ಕೆಲಸ ಮಾಡುವುದು ಸರಿಯೇ? ಎಂದು ಪುಟ 2ಕ್ಕೆ



# ಗಾಂಧೀಜಿ ಸಂಕಲ್ಪ ಈಡೇರಿಸಲು ಕಾಂಗ್ರೆಸ್ ಸರ್ಕಾರ ಒತ್ತು: ಡಿಕೆಶಿ

**ಬೆಂಗಳೂರು:** ಮಹಾತ್ಮ ಗಾಂಧಿ ಅವರ ಹೆಸರನ್ನು ಶಾಶ್ವತವಾಗಿ ಉಳಿಸಿಕೊಳ್ಳುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಲಿದೆ. ಹಳ್ಳಿಗೊಂದು ಶಾಲೆ, ಸಹಕಾರ ಸಂಘ, ಪಂಚಾಯಿತಿ ಇರಬೇಕು ಎಂಬುದು ಗಾಂಧೀಜಿ ಅವರ ಸಂಕಲ್ಪ. ಅವರ ಸಂಕಲ್ಪವನ್ನು ನನಸು ಮಾಡುತ್ತೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ರಾಜಭವನ ಚಲೋ ಮಹಾತ್ಮ ಗಾಂಧಿ ನರೇಗಾ ಬಚಾವ್ ಸಂಗ್ರಾಮ ಪ್ರತಿಭಟನೆಯಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್ ಮಾತನಾಡಿದರು.

ಬಡ ಜನರ ಉದ್ಯೋಗದ ಹಕ್ಕಿನ ಪರವಾಗಿ ನಾವು ಹೋರಾಟ ಮಾಡುತ್ತಿದ್ದೇವೆ. ಉದ್ಯೋಗ ಇಲ್ಲದವರಿಗೆ ಉದ್ಯೋಗ ನೀಡಿದ್ದು ಮನಮೋಹನ್ ಸಿಂಗ್ ಸರ್ಕಾರ. ನಮ್ಮ ಉದ್ಯೋಗ ಖಾತರಿ ಯೋಜನೆಯನ್ನು ವಿಶ್ವವೇ ಮೆಚ್ಚಿತ್ತು. ಈ ಯೋಜನೆ ಬಹಳ ಅತ್ಯುತ್ತಮ ಯೋಜನೆ ಎಂದು ವಿಶ್ವಬ್ಯಾಂಕ್ 2013ರಲ್ಲಿ ಶ್ಲಾಘಿಸಿತ್ತು. ರಾಜ್ಯದಲ್ಲಿ 5700 ಪಂಚಾಯ್ತಿಗಳಿದ್ದು, ಪ್ರತಿ ವರ್ಷ ನಮ್ಮ ರಾಜ್ಯದಲ್ಲಿ ಈ ಪುಟ 2ಕ್ಕೆ

### ಬಿಜೆಪಿಗೆ ಯೋಗ್ಯತೆ ಇಲ್ಲ

**ಬೆಂಗಳೂರು:** ಬಿಜೆಪಿ ನಾಯಕರು ಗಾಂಧಿ ಪ್ರತಿಮೆ ಮುಂದೆ ಕೂತು ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ, ಬಿಜೆಪಿಯವರು ಗಾಂಧಿ ಪ್ರತಿಮೆ ಮುಂದೆ ಕೂರುವ ಹಕ್ಕನ್ನು ಕಳೆದುಕೊಂಡಿದ್ದಾರೆ. ಇನ್ನುಮುಂದೆ ನಿಮ್ಮ ಕಚೇರಿಯಲ್ಲಿ ಗಾಂಧಿ ಭಾವಚಿತ್ರ ಇಟ್ಟುಕೊಳ್ಳುವ ಯೋಗ್ಯತೆ ನಿಮಗಿಲ್ಲ ಎಂದು ಬಿಜೆಪಿ ವಿರುದ್ಧ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.

ಹಳ್ಳಿಗಳ ಉದ್ಧಾರಕ್ಕೆ ನೀಡಿದ ಯೋಜನೆ ನರೇಗಾ. ಬಿಜೆಪಿಯಿಂದ ದೇಶಕ್ಕೆ ಹರಡುತ್ತಿದೆ ನಿರುದ್ಯೋಗದ ರೋಗ. ಬಿಜೆಪಿ ಗಾಂಧಿ ದ್ವೇಷಕ್ಕೆ ಧಿಕ್ಕಾರ. ನರೇಗಾ ರದ್ದಾಗಲು ಎಂದಿಗೂ ಬಿಡುವುದಿಲ್ಲ. ನಮಗೆ ವಿಬಿ ಗ್ರಾಮ್ ಜೀ ಬೇಕು. ನಮಗೆ ಗಾಂಧಿ. ನಮ್ಮದೇ ಸರ್ಕಾರ ಇದ್ದರೂ ನಾವು ಜೈಲಿಗೆ ಹೋದರೂ ಸರಿ, ನರೇಗಾ ಯೋಜನೆ ಮರುಜಾರಿಗೆ ಹೋರಾಟ ಪುಟ 2ಕ್ಕೆ



### ಮತ್ತೊಂದು ಹುಲಿ ಮರಿ ಸೆರೆ

**ಚಾಮರಾಜನಗರ:** ತಾಲ್ಲೂಕಿನ ನಂಜೇದೇವನಪುರ ಗ್ರಾಮದಲ್ಲಿ ತಾಯಿ ಹುಲಿ ಜೊತೆ ನಾಲ್ಕು ಮರಿ ಹುಲಿ ಪತ್ತೆಯಾಗಿದ್ದ ಪ್ರಕರಣದಲ್ಲಿ ಇದೀಗ ಮತ್ತೊಂದು ಹುಲಿ ಮರಿಯನ್ನು ಸೆರೆ ಹಿಡಿಯಲಾಗಿದೆ. ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಸೋಮವಾರ ತಡರಾತ್ರಿ ಹುಲಿ ಮರಿ ಸೆರೆಯಾಗಿದೆ. ಈಗಾಗಲೇ ಗಂಡು ಹುಲಿ, ತಾಯಿ ಹುಲಿ ಹಾಗೂ ಮೂರು ಹುಲಿ ಮರಿಗಳನ್ನು ಅರಣ್ಯ ಸಿಬ್ಬಂದಿ ಸೆರೆ ಹಿಡಿದಿದ್ದಾರೆ. ಮತ್ತೊಂದು ಹುಲಿ ಮರಿಯನ್ನು ಸೆರೆ ಹಿಡಿಯುವುದು ಮಾತ್ರ ಬಾಕಿ ಇದೆ. ಮತ್ತೊಂದು ಹುಲಿ ಮರಿ ಸೆರೆಗಾಗಿ ಅರಣ್ಯ ಇಲಾಖೆ ಸಿಬ್ಬಂದಿ ಮುಂದಾಗಿದ್ದಾರೆ. ನಾಲ್ಕು ಸಾಕಾನೆ ಬಳಸಿಕೊಂಡು ಅಧಿಕಾರಿಗಳು ಕಾರ್ಯಾಚರಣೆಗೆ ಮುಂದುವರಿಸಿದ್ದಾರೆ.

### ರಸ್ತೆ ಅಪಘಾತ: ಬೈಕ್ ಸವಾರ ಸಾವು

**ಚಾಮರಾಜನಗರ:** ಕೆಎಸ್‌ಆರ್‌ಟಿಸಿ ಬಸ್‌ಗೆ ಬೈಕ್ ಡಿಕ್ಕಿಯಾಗಿ ಬೈಕ್ ಸವಾರ ಸ್ಥಳದಲ್ಲೇ ಸಾವನಪ್ಪಿರುವ ಘಟನೆ ತಾಲ್ಲೂಕಿನ ಮಲೆಯೂರು– ಮುಕ್ಕಡಹಳ್ಳಿ ರಸ್ತೆಯಲ್ಲಿ ಮಂಗಳವಾರ ಸಂಭವಿಸಿದೆ. ಮುಕ್ಕಡಹಳ್ಳಿ ಗ್ರಾಮದ ಶಿವಸ್ವಾಮಿ (ಪುಟ್ಟು) (34) ಮೃತಪಟ್ಟ ದುರ್ದೈವಿ.

ಹಿಂಬದಿ ಸವಾರ ನಾಗರಾಜು ಗಾಯಗೊಂಡಿದ್ದಾರೆ. ಮುಕ್ಕಡಹಳ್ಳಿಯಿಂದ ಮಲೆಯೂರು ಕಡೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ನೇರವಾಗಿ ಬೈಕ್ ಸವಾರ ಡಿಕ್ಕಿ ಹೊಡೆದಿದ್ದಾನೆ ಎಂದು ಗ್ರಾಮಾಂತರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

### ಬೈಕ್‌ಗೆ ಬಸ್ ಡಿಕ್ಕಿ: ಪತ್ನಿ ಸಾವು, ಪತಿಗೆ ಗಾಯ

**ಮೈಸೂರು:** ಬೈಕ್‌ಗೆ ಬಸ್ ಡಿಕ್ಕಿ ಹೊಡೆದು ಮಹಿಳೆ ಸಾವನ್ನಪ್ಪಿದ್ದಾರೆ. ಅಲ್ಲದೆ, ಇಬ್ಬರು ಗಾಯಗೊಂಡಿರುವ ಘಟನೆ ಹುಣಸೂರು ತಾಲ್ಲೂಕಿನ ಯಶೋಧರಪುರ ಗೇಟ್ ಬಳಿ ನಡೆದಿದೆ.



ಹುಣಸೂರು ತಾಲ್ಲೂಕಿನ ನಾಗಮಂಗಲ ಗ್ರಾಮದ ನಿವಾಸಿ ಜೀವನ್ ಪತ್ನಿ ಅಶ್ವಿನಿ (36) ಮೃತಪಟ್ಟವರು. ಪತಿ ಜೊತೆ ಹಿಂಬದಿಯಲ್ಲಿ ಕುಳಿತಿದ್ದ ಮಹಿಳೆ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಆಕೆಯ ಪತಿ ಹಾಗೂ ಮಗು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.


ಜೀವನ್ ಬೈಕಿನಲ್ಲಿ ಪತ್ನಿ ಹಾಗೂ ಮಗುವಿನೊಂದಿಗೆ ಹುಣಸೂರು ಕಡೆಗೆ ಬರುತ್ತಿದ್ದ ಪುಟ 2ಕ್ಕೆ

### ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ 'ಕೈಕೊಟ್ಟವರ' ಮಾಹಿತಿ: ಡಿಸಿಎಂ ಡಿ.ಕೆ.ಶಿವಕುಮಾರ್

**ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ನೂರು ಕಚೇರಿ ನಿರ್ಮಾಣ ವಿಚಾರದಲ್ಲಿ ಆಸಕ್ತಿ ತೋರಿಸಿದ ಮತ್ತು ತೋರದವರ ಕುರಿತು ಎರಡು ದಿನಗಳಲ್ಲಿ ಎಐಸಿಸಿ ನಾಯಕರಿಗೆ ಮಾಹಿತಿ ನೀಡುತ್ತೇನೆ ಎಂದು ಕೆಪಿಸಿಸಿ ಅಧ್ಯಕ್ಷರಾದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಭವನ್ ಟ್ರಸ್ಟ್ ಸಮಿತಿ ಸಭೆಯ ಬಳಿಕ ಪತ್ರಕರ್ತರ ಜೊತೆ ಮಾತನಾಡಿದ ಅವರು, ಈ ಬಗ್ಗೆ ಲಿಖಿತ ಮಾಹಿತಿ ನೀಡುವಂತೆ ವರಿಷ್ಠರು ಸೂಚಿಸಿದ್ದಾರೆ ಎಂದು ಹೇಳಿದರು.

ರಾಜ್ಯದ ಯಾವ ತಾಲ್ಲೂಕಿನಲ್ಲಿ ಕಚೇರಿ ಆಗಿದೆ, ಯಾವ ತಾಲ್ಲೂಕಿನಲ್ಲಿ ಆಗಿಲ್ಲ? ಕಚೇರಿ ನಿರ್ಮಾಣ ವಿಚಾರದಲ್ಲಿ ಯಾರು ಆಸಕ್ತಿ ವಹಿಸಿದ್ದಾರೆ, ಯಾರು ಆಸಕ್ತಿ ವಹಿಸಿಲ್ಲ ಎನ್ನುವುದನ್ನು ಸಭೆಯಲ್ಲಿ ಚರ್ಚಿಸಲಾಯಿತು. ರಾಜ್ಯದಲ್ಲಿರುವ ಪಕ್ಷದ ಆಸ್ತಿಗಳು, ದಾಖಲೆಗಳು, ತೆರಿಗೆ ಪಾವತಿ ಸೇರಿದಂತೆ ಅನೇಕ ಅಂಶಗಳ ಬಗ್ಗೆ ಸಭೆಯಲ್ಲಿ ಪರಿಶೀಲನೆ ನಡೆಸಲಾಗಿದೆ. ನೂತನ ಕಚೇರಿ ನಿರ್ಮಾಣ ಪ್ರಕ್ರಿಯೆ ಪುಟ 2ಕ್ಕೆ



### ವರ್ಷಕ್ಕೆ 5 ಬಾರಿ ನಿಯಮ ಉಲ್ಲಂಘಿಸಿದರೆ ಡಿಎಲ್ ರದ್ದು

**ಬೆಂಗಳೂರು:** ರಸ್ತೆ ಸುರಕ್ಷತೆ ಹೆಚ್ಚಿಸಲು ಮತ್ತು ಪುನರಾವರ್ತಿತ ಸಂಚಾರ ನಿಯಮಗಳ ಉಲ್ಲಂಘನೆ ತಡೆಯಲು ಸಾರಿಗೆ ಇಲಾಖೆಯ ಕಟ್ಟುನಿಟ್ಟಿನ ಕಾನೂನು ಕ್ರಮವನ್ನು ಜಾರಿಗೆ ತಂದಿದೆ. ಹೊಸ ಮಾರ್ಗಸೂಚಿ ಪ್ರಕಾರ, ವಾಹನ ಸವಾರರು ಒಂದು



ವರ್ಷದ ಅವಧಿಯಲ್ಲಿ ಐದು ಬಾರಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿದರೆ ಅವರ ಚಾಲನಾ ಪರವಾನಿಗೆ ರದ್ದಾಗಲಿದೆ.

ಮೋಟಾರು ವಾಹನ ಕಾಯ್ದೆಗೆ ಕೇಂದ್ರ ಸರ್ಕಾರ ತಂದ ತಿದ್ದುಪಡಿಯ ಅನ್ವಯ ಹೊಸ ನಿಯಮ ಈ ವರ್ಷದ ಜನವರಿ 1ರಿಂದ ಜಾರಿಗೆ ಬಂದಿದೆ. ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ (ಆರ್‌ಟಿಒ) ಪರವಾನಿಗೆಯನ್ನು ರದ್ದುಗೊಳಿಸುವ ಅಧಿಕಾರವನ್ನು ನೀಡಲಾಗಿದೆ. ಅತಿಯಾದ ವೇಗ, ಕುಡಿದು ಚಾಲನೆ, ಮೊಬೈಲ್ ಬಳಕೆ, ಸಿಗ್ನಲ್ ಜಂಪ್, ಹೆಲ್ಮೆಟ್ ಅಥವಾ ಸೀಟ್‌ಬೆಲ್ಟ್ ಧರಿಸದಿರುವುದು ಸೇರಿದಂತೆ ಒಟ್ಟು 24 ಅಪರಾಧಗಳಿಗೆ ಈ ನಿಯಮ ಅನ್ವಯವಾಗಲಿದೆ.

# ಬಿಜೆಪಿ–ಜೆಡಿಎಸ್ ದೋಸ್ತಿ ಪ್ರತಿಭಟನೆ

## * ರಾಜ್ಯಪಾಲರಿಗೆ ಅವಮಾನ: ಬಿಜೆಪಿ ಶಾಸಕರ ವಿರುದ್ಧ ಕ್ರಮಕ್ಕೆ ಆಗ್ರಹ

**ಬೆಂಗಳೂರು:** ರಾಜ್ಯ ವಿಧಾನಸಭೆ ಜಂಟಿ ಅಧಿವೇಶನದ ಸಂದರ್ಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರನ್ನು ಕಾಂಗ್ರೆಸ್ ಶಾಸಕರು ಅವಮಾನಿಸಿದ್ದಾರೆಂದು ಆರೋಪಿಸಿ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಮಂಗಳವಾರ ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು ರಾಜ್ಯಪಾಲರನ್ನು ಅಗೌರವಿಸಿದ ಕಾಂಗ್ರೆಸ್ ಶಾಸಕರನ್ನು ಸದನದಿಂದ ಅಮಾನತುಗೊಳಿಸಬೇಕೆಂದು ಒತ್ತಾಯಿಸಿದರು.

ಅಬಕಾರಿ ಇಲಾಖೆಯ ಹಗರಣಕ್ಕೆ ಸಂಬಂಧಿಸಿದಂತೆ ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ ಅವರನ್ನು ವಜಾಗೊಳಿಸಬೇಕೆಂದು ಒತ್ತಾಯಿಸಿದ ಅವರು, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ವೈಫಲ್ಯಗಳು ಮತ್ತು ಮಹಿಳೆಯರಿಗೆ ಅಸಮರ್ಪಕ ಭದ್ರತೆ ಕುರಿತು ರಾಜ್ಯ ಸರ್ಕಾರವನ್ನು ದೂಷಿಸಿದರು.



ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಅಬಕಾರಿ ಸಚಿವರು ಮತ್ತು ಅವರ ಕುಟುಂಬ ಸದಸ್ಯರು ಭಾಗಿಯಾಗಿರುವ 6,000 ಕೋಟಿ ಹಗರಣದ ಬಗ್ಗೆ ಈಗಾಗಲೇ ಪುರಾವೆಗಳು ಹೊರಬಿದ್ದಿದೆ. ಸಿಬಿಐ ಅಥವಾ ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು. ಸಿದ್ದರಾಮಯ್ಯ ಸರ್ಕಾರ ಇಡೀ ಹಗರಣವನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿದೆ. ನಾಟಕ ಸೃಷ್ಟಿಸುತ್ತಿದೆ. ಸದನದ ಹೊರಗೆ ಮತ್ತು ಸದನದ ಒಳಗೆ, ನಾವು ಅಬಕಾರಿ ಸಚಿವರ ರಾಜೀನಾಮೆಗೆ ಒತ್ತಾಯಿಸಲಿದ್ದೇವೆ ಎಂದು ವಾಗ್ದಾಳಿ ನಡೆಸಿದರು. ಪುಟ 2ಕ್ಕೆ

### ಧಮ್ಕಿ ರಾಜೀವ್ ಗೌಡಗೆ ಸಹಾಯ: ಮೈಕಲ್ ಬಂಧನ

**ಚಿಕ್ಕಬಳ್ಳಾಪುರ:** ಶಿಡ್ಲಘಟ್ಟದ ನಗರಸಭೆ ಪೌರಾಯುಕ್ತೆ ಅಮೃತಗೌಡ ಅವರಿಗೆ ಧಮ್ಕಿ ಹಾಕಿದ್ದ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರಿಗೆ ತಲೆಮರೆಸಿಕೊಳ್ಳಲು ಸಹಾಯ ಮಾಡಿದ್ದ ಆರೋಪಿಯನ್ನು ಚಿಕ್ಕಬಳ್ಳಾಪುರ ಪೊಲೀಸರು ಬಂಧಿಸಿದ್ದಾರೆ.

ಮಂಗಳೂರಿನ ಮೈಕಲ್ ಜೋಸೇಫ್ ರೆಗೋ ಬಂಧಿತ ಆರೋಪಿ. ಮಂಗಳೂರಿನ ಪಚ್ಚನಾಡಿ ಬಳಿಯ ಈತನಿಗೆ ಸೇರಿದ್ದ ಜೆ.ಕೆ.ಫಾರ್ಮ್ ಹೌಸ್‌ನಲ್ಲಿ ರಾಜೀವ್ ಗೌಡ ತಲೆಮರೆಸಿಕೊಂಡಿದ್ದ. ಈ ಮಾಹಿತಿ ತಿಳಿದು ಚಿಕ್ಕಬಳ್ಳಾಪುರ ಪೊಲೀಸರು ಅಲ್ಲಿಗೆ ಹೊರಟಿದ್ದರು. ಈ ವಿಚಾರ ತಿಳಿದ ಆರೋಪಿ ರಾಜೀವ್ ಗೌಡ, ತನ್ನ ಕಾರನ್ನು ಮಂಗಳೂರು ರೈಲ್ವೇ ನಿಲ್ದಾಣದಲ್ಲಿ ಬಿಟ್ಟು ಮೈಕಲ್‌ನ ಕಾರಿನಲ್ಲಿ ಕೇರಳಕ್ಕೆ ತೆರಳಿದ್ದ. ಇಬ್ಬರನ್ನೂ ಪೊಲೀಸರು ಕೇರಳದಲ್ಲಿ ಬಂಧಿಸಿದ್ದರು.

ಪೌರಾಯುಕ್ತರಿಗೆ ಧಮ್ಕಿ ಹಾಕಿದ್ದ ಆಡಿಯೋ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದಂತೆ ರಾಜೀವ್ ಗೌಡ ಕ್ಷಮೆ ಕೋರಿದ್ದ. ಆದರೆ ಅಮೃತ ಗೌಡ ಪೊಲೀಸರಿಗೆ ದೂರು ನೀಡಿದ್ದರು. ಪುಟ 2ಕ್ಕೆ

# ಯುಪಿ ಸ್ಪೀಕರ್‌ಗೆ ಮೈಸೂರಿನ ಕುರ್ಚಿ!

## ನಗರದ ಶಿಲ್ಪಿ ಕೈಸರ್ ಅಲಿ ಕೈಚಳಕ ಭವ್ಯ ಪೀಠ ಸಿದ್ಧ

**ಮೈಸೂರು:** ಉತ್ತರ ಪ್ರದೇಶದ ವಿಧಾನಸಭೆಯ ಸ್ಪೀಕರ್ ಗಾಗಿ ಮೈಸೂರಿನಲ್ಲಿ ಕುರ್ಚಿ ತಯಾರು ಮಾಡಲಾಗುತ್ತಿದೆ. ಮೈಸೂರಿನ ಲಷ್ಕರ್ ಮೊಹಲ್ಲದ ಶಿಲ್ಪಿ ಕೈಸರ್ ಅಲಿ ಖಾನ್ ಅವರ ಕೈಚಳಕದಲ್ಲಿ ಈ ಭವ್ಯ ಪೀಠ ರೂಪುಗೊಂಡಿದೆ.

ರಾಜ್ಯದ ಪಾರಂಪರಿಕ ಶೈಲಿ, ರಾಜಸಿಕ ವಿನ್ಯಾಸ ಎಲ್ಲವೂ ಸೇರಿ ಈ ಕುರ್ಚಿಗೆ ಗಂಭೀರತೆಯನ್ನು ನೀಡಿದೆ. ಇದು ಕರ್ನಾಟಕದ ಶಿಲ್ಪಕಲೆಯ ವೈಭವವನ್ನು ಉತ್ತರ ಭಾರತದ ವಿಧಾನಸಭೆಯೊಳಗೆ ಪ್ರತಿಷ್ಠಾಪಿಸಲಿದೆ. ಮರದ ಮೇಲೆ ಸೂಕ್ಷ್ಮವಾದ ಕೆತ್ತನೆ ಇದೆ.

ರಾಜಕೀಯ ವಲಯದಲ್ಲಿ ಗುಜರಾತ್ ಮಾಡೆಲ್, ಯುಪಿ ಮಾಡೆಲ್ ಎಂಬ ಬಗ್ಗೆ ಚರ್ಚೆ ನಡೆಯುತ್ತಿತ್ತು. ಈಗ ಸ್ಪೀಕರ್ ಕುರ್ಚಿಯೇ ಕರ್ನಾಟಕದಲ್ಲಿ ತಯಾರಾಗಿರುವಾಗ ಕರ್ನಾಟಕ ಮಾಡೆಲ್ ಅನ್ನು ದೇಶವೇ ಒಪ್ಪಿಕೊಂಡಂತಾಗಿದೆ. ರಾಜ್ಯದ ಕೈಗಾ



ರಿಕೆ, ಕಲೆ ಮತ್ತು ಶಿಲ್ಪಪರಂಪರೆಯ ಗರ್ವಕ್ಕೆ ಮತ್ತೊಂದು ದೊಡ್ಡ ಸಾಕ್ಷಿಯಾಗಿದೆ.

ಮೈಸೂರಿನಂತಹ ಪಾರಂಪರಿಕ ನಗರದಲ್ಲಿ ಬೆಳೆದಿರುವ ಕರಕುಶಲ ಪರಂಪರೆ ಪುಟ 2ಕ್ಕೆ

### ಸ್ಪೀಕರ್ ಖಾದರ್ ಪಾತ್ರ

ಕರ್ನಾಟಕ ವಿಧಾನಸಭಾಧ್ಯಕ್ಷರ ಪೀಠವನ್ನು 1956ರಲ್ಲಿ ಸಿದ್ಧಪಡಿಸಲಾಗಿದೆ. ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯರ ಆಣತಿಯಂತೆ ಹುಣಸೂರು ಬೀಟಿಮರ ಹಾಗೂ ಶಿವಮೊಗ್ಗದ ಗುಡಿಕಾರರಿಂದ ಈ ಪೀಠ ಕೆತ್ತನೆಯಾಗಿತ್ತು. ಸ್ಪೀಕರ್ ಆಸೀನರಾಗುವ ಪೀಠದ ಮೇಲ್ತುದಿಯಲ್ಲಿ ಕೊಡೆ ಹಾಗೂ ರಾಷ್ಟ್ರ ಲಾಂಛನದ ಕೆತ್ತನೆಯಿದೆ. ಸಭಾಧ್ಯಕ್ಷರು ಕೈಇಟ್ಟು ಕೂರುವಲ್ಲಿ ಅರ್ಧ ಸಿಂಹ ಹಾಗೂ ಆನೆಯ ಕಲಾಕೃತಿ ಒಳಗೊಂಡಿದೆ. ಈ ಪೀಠವನ್ನು ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ ಕಾಮನ್‌ವೆಲ್ತ್ ಸಮ್ಮೇಳನಕ್ಕೆ ಬಂದಿದ್ದ ಉತ್ತರ ಪುಟ 2ಕ್ಕೆ

# ಸಚಿವ ತಿಮ್ಮಾಪುರ ರಾಜೀನಾಮೆಗೆ ಆಗ್ರಹ

## ಅಬಕಾರಿ ಇಲಾಖೆ ಲಂಚಾವತಾರ | ಸದನದಲ್ಲಿ ಕಾವೇರಿದ ಚರ್ಚೆ

**ಬೆಂಗಳೂರು:** ರಾಜ್ಯದ ಅಬಕಾರಿ ಇಲಾಖೆಯಲ್ಲಿ ನಡೆದಿರುವ ಲಂಚ ಪ್ರಕರಣ ಮತ್ತು ಅಕ್ರಮದ ನೈತಿಕ ಹೊಣೆ ಹೊತ್ತು ಅಬಕಾರಿ ಸಚಿವ ತಿಮ್ಮಾಪುರ ರಾಜೀನಾಮೆ ಕೊಡಬೇಕು. ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ಅಬಕಾರಿ ಇಲಾಖೆ ಭ್ರಷ್ಟಾಚಾರದ ಬಗ್ಗೆ ತನಿಖೆ ಆಗಬೇಕು ಎಂದು ಬಿಜೆಪಿ ನಾಯಕರು ಆಗ್ರಹಿಸಿದರು.

ವಿಧಾನ ಪರಿಷತ್ ಕಲಾಪದಲ್ಲಿ ನಿಯಮ 330ರ ಅಡಿ ಬಿಜೆಪಿ ವಿಷಯ ಪ್ರಸ್ತಾಪ ಮಾಡಿತು. ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಅಬಕಾರಿ ಇಲಾಖೆಯಲ್ಲಿ ಕೋಟಿ ಕೋಟಿ ಅಕ್ರಮ ನಡೆಯುತ್ತಿದೆ. ಅಧಿಕಾರಿಗಳು ಹಣ ಸಂಗ್ರಹ ಮಾಡುವಾಗ ಲೋಕಾಯುಕ್ತಕ್ಕೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಲೈಸೆನ್ಸ್ ಕೊಡಲು ಒಂದೂವರೆ ಕೋಟಿ ಲಂಚ ಪಡೆಯು



ವಾಗ 3 ಅಧಿಕಾರಿಗಳು ಸಿಕ್ಕಿ ಬಿದ್ದರು. ಸರ್ಕಾರದ ಭ್ರಷ್ಟಾಚಾರಕ್ಕೆ ಇದು ಸಾಕ್ಷಿ ಎಂದು ಕಿಡಿಕಾರಿದರು.

ಈಗಾಗಲೇ ಲಂಚ ಪ್ರಕರಣದ ಬಗ್ಗೆ ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ. ಸಚಿವರು ನನ್ನ ಮಗನನ್ನ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಹೇಳ್ತಾರೆ. ಹಾಗಾದರೆ ಮಂತ್ರಿಗಳು ಮಗನ ಕೈಗೆ ಹಣ ಕೊಡಿ ಅಂತ ಹೇಳಿದ್ದರೆ? ಲಿಕ್ಕರ್ ಲೈಸೆನ್ಸ್ ಕೊಡ್ತಿಲ್ಲ ಅಂತ ಸರ್ಕಾರ ಹೇಳಿದ್ದರೂ 2 ಸಾವಿರ ಲೈಸೆನ್ಸ್ ಅಕ್ರಮವಾಗಿ ಕೊಡಲಾಗಿದೆ. 50 ಲಕ್ಷದಿಂದ 1 ಕೋಟಿವರೆಗೂ ಲಂಚ ಕೊಡಬೇಕು ಎಂದು ಸಂಘದ ಅಧ್ಯಕ್ಷರು ಹೇಳಿದ್ದಾರೆಂದು ಆರೋಪಿಸಿದರು.

ಸಚಿವರು, ನನ್ ಇಲಾಖೆಯಲ್ಲಿ ಮಾತ್ರ ಅಲ್ಲ. ಎಲ್ಲಾ ಇಲಾಖೆಯಲ್ಲಿ ನಡೆಯುತ್ತಿದೆ ಅವರನ್ನು ಕೇಳಿ ಎಂದಿದ್ದಾರೆ. ಭ್ರಷ್ಟಾಚಾರ ಮಾಡೋಕೆ ಮಂತ್ರಿ ಮಂಡಲ ಇದ್ದರೆ ನಾವು ವಿಪಕ್ಷ ನೋಡಿಕೊಂಡು ಇರಬೇಕಾ? ಭ್ರಷ್ಟಾಚಾರ ಮಾಡೋರಿಗೆ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು.

ಶಾಸಕ ರವಿಕುಮಾರ್ ಮಾತಾಡಿ, ಮಂತ್ರಿಗಳ ಸಹಕಾರ ಇಲ್ಲದೆ ಈ ಪ್ರಮಾಣದ ಲಂಚ ಪಡೆಯಲು ಸಾಧ್ಯವೇ? ಮಂತ್ರಿಯ ಬೆಂಬಲ, ಸರ್ಕಾರದ ಬೆಂಬಲ ಇಲ್ಲದೆ ಇಷ್ಟು ಅಕ್ರಮ ಆಗಲ್ಲ. ಆಡಿಯೋ ರೆಕಾರ್ಡಿಂಗ್ ಇದೆ. ಈಗ ನೈತಿಕ ಪುಟ 2ಕ್ಕೆ

ಮೊದಲ ಪುಟದಿಂದ

## ಗಾಂಧೀಜಿ ಸಂಕಲ್ಪ ಈಡೇರಿಸಲು ಒತ್ತು

ಯೋಜನೆಯಿಂದ 6 ಸಾವಿರ ಕೋಟಿ ಖರ್ಚು ಮಾಡಲಾಗುತ್ತಿತ್ತೆ ಎಂದು ಹೇಳಿದರು. ಈ ಯೋಜನೆ ಆಂದೋಲನವಾಗಿ ನಡೆಯುತ್ತಿತ್ತು. ಈ ಯೋಜನೆಗೆ ಕೇಂದ್ರ ಸರ್ಕಾರ 90ರಷ್ಟು ಅನುದಾನ ನೀಡುತ್ತಿತ್ತು. ಕಬ್ಬಿಣ, ಸಿಮೆಂಟ್ ನಂತಹ ಸಾಮಾಗ್ರಿಗಳ ಬಳಕೆಯ ಕಾಮಗಾರಿಗಳಿದ್ದರೆ, ಅವುಗಳಿಗೆ ರಾಜ್ಯ ಸರ್ಕಾರ ಶೇ.25 ಅನುದಾನ ನೀಡಬೇಕಾಗಿತ್ತು. 7 ಸಾವಿರ ಜನ ಇದರ ಜವಾಬ್ದಾರಿ ವಹಿಸಿದ್ದರಿಂದ ಉದ್ಯೋಗ ಸೃಷ್ಟಿಯಾಗಿತ್ತು. ಮಹಾತ್ಮ ಗಾಂಧಿ ಅವರ ಹೆಸರನ್ನು ಬದಲಿಸಿ ಈ ಕಾಯ್ದೆಗೆ ಹೊಸ ರೂಪ ನೀಡಿದ್ದಾರೆ. ನೂತನ ಕಾಯ್ದೆ ಪ್ರಕಾರ ಕೇಂದ್ರ ಸರ್ಕಾರ 60 ರಷ್ಟು ಹಾಗೂ ರಾಜ್ಯ ಸರ್ಕಾರ ಶೇ.40 ಅನುದಾನ ಭರಿಸಬೇಕಾಗಿದೆ. ಈ ಬಗ್ಗೆ ಚರ್ಚೆ ಮಾಡಲು ವಿಶೇಷ ಅಧಿವೇಶನ ನಡೆಸುತ್ತಿದ್ದೇವೆ. 2 ದಿನಗಳ ಕಾಲ ಈ ವಿಚಾರವಾಗಿ ಚರ್ಚೆ ಮಾಡುತ್ತೇವೆ. ಬಿಜೆಪಿ ನಾಯಕರು ಏನು ಮಾತನಾಡುತ್ತಾರೆ ನೋಡೋಣ ಎಂದು ಕುಟುಕಿದರು.

## ಎಚ್‌ಡಿಕೆಗೆ ಡಿಕೆಶಿ ಸವಾಲು

ಡಿ.ಕೆ.ಶಿವಕುಮಾರ್ ಕಿಡಿಕಾರಿದರು. ಕೇಂದ್ರ ಬಿಜೆಪಿ ಸರ್ಕಾರ ನರೇಗಾ ಯೋಜನೆ ಅನುದಾನವನ್ನು ಬಾಕಿ ಉಳಿಸಿಕೊಂಡಿದೆ. ಬಿಜೆಪಿ ಆಡಳಿತ ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ನೂತನ ಯೋಜನೆ ಅನುಷ್ಠಾನ ಸಾಧ್ಯವಿಲ್ಲ. ಎನ್ ಡಿಎ ಮೈತ್ರಿ ನಾಯಕ ಚಂದ್ರಬಾಬು ನಾಯ್ಡು ಅವರೇ ಈ ಯೋಜನೆಗೆ ಅಪಸ್ವರ ಎತ್ತಿದ್ದು, ಇದನ್ನು ಜಾರಿ ಸಾಧ್ಯವಿಲ್ಲ ಎಂದಿದ್ದಾರೆ. ಕೇಂದ್ರ ಬಿಜೆಪಿ ಸರ್ಕಾರ ನೂತನ ಕಾಯ್ದೆ ಹಿಂಪಡೆಯದಿದ್ದರೆ ಸರ್ಕಾರಕ್ಕೆ ಆಪತ್ತು ಎದುರಾಗಲಿದೆ. ಚಂದ್ರಬಾಬು ನಾಯ್ಡು ಅವರು ಎಚ್ಚರಿಕೆ ಗಂಟೆ ರವಾನಿಸಿದ್ದಾರೆ ಎಂದರು.

ಕೇಂದ್ರ ಸರ್ಕಾರ ರೈತರ, ಕಾರ್ಮಿಕರ ಹಕ್ಕು, ಪಂಚಾಯ್ತಿ ಅಧಿಕಾರ ಕಸಿಯುತ್ತಿದೆ. ಇದರ ವಿರುದ್ಧ ನಮ್ಮ ಹೋರಾಟ. ಮುಂದಿನ ದಿನಗಳಲ್ಲಿ ಪ್ರತಿ ಪಂಚಾಯ್ತಿಯಲ್ಲಿ ನರೇಗಾ ಕಾರ್ಮಿಕರನ್ನು ಒಳಗೊಂಡು ತಾಲ್ಲೂಕು ಮಟ್ಟದಲ್ಲಿ 5 ಕಿ.ಮೀ ಪಾದಯಾತ್ರೆ ನಡೆಸಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಪರಿಷತ್ ಸದಸ್ಯರ ನೇತೃತ್ವದಲ್ಲಿ ಈ ಪಾದಯಾತ್ರೆ ನಡೆಯಬೇಕಿದೆ ಎಂದು ತಿಳಿಸಿದರು.

## ಬಿಜೆಪಿಗೆ ಯೋಗ್ಯತೆ ಇಲ್ಲ

ಮುಂದುವರಿಸುತ್ತೇವೆ. ಕೇಂದ್ರ ಸರ್ಕಾರ ಕೃಷಿ ಕರಾಳ ಕಾಯ್ದೆಯನ್ನು ಹಿಂಪಡೆದಂತೆ ಇದನ್ನು ಹಿಂಪಡೆಯುವವರೆಗೂ ನಮ್ಮ ಹೋರಾಟ ನಡೆಯಲಿದೆ ಎಂದು ಹೇಳಿದರು.

ನನ್ನ ಕ್ಷೇತ್ರ ಕನಕಪುರದಲ್ಲಿ ವರ್ಷಕ್ಕೆ 200 ಕೋಟಿ ರೂ. ಅನುದಾನ ಬಳಸಿಕೊಂಡು ಅನೇಕ ಅಭಿವೃದ್ಧಿ ಕಾರ್ಯ ಮಾಡಲಾಗಿದೆ. ಆಮೂಲಕ ಈ ಯೋಜನೆ ಪರಿಣಾಮಕಾರಿ ಜಾರಿಗೊಳಿಸಿದ ತಾಲ್ಲೂಕಿನಲ್ಲಿ ಅಗ್ರಸ್ಥಾನ ಪಡೆದಿದೆ. ಈ ಯೋಜನೆಯಲ್ಲಿ ಡಿ.ಕೆ.ಶಿವಕುಮಾರ್ ಹಣ ಹೊಡೆದಿದ್ದಾನೆ ಎಂಬ ಅನುಮಾನದ ಮೇಲೆ ಕೇಂದ್ರ ಸರ್ಕಾರ ತನಿಖೆ ಮಾಡಿಸಿದೆ. ನಂತರ ಅವರೇ ನಮ್ಮ ಕೆಲಸ ನೋಡಿ ಪ್ರಶಸ್ತಿ ನೀಡಿದರು ಎಂದು ಟೀಕಿಸಿದರು.

## ದೋಸ್ತಿ ಪ್ರತಿಭಟನೆ

ಕಳೆದ ಎರಡು ವರ್ಷಗಳಲ್ಲಿ 6,000 ಕೋಟಿ ಸಂಗ್ರಹಿಸಿ ಈ ಸರ್ಕಾರಕ್ಕೆ ನೀಡಲಾಗಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷರು ಹೇಳಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಅಥವಾ ಅಬಕಾರಿ ಸಚಿವರು ಏನು ಉತ್ತರ ನೀಡುತ್ತಾರೆ? ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷರಿಗೆ ಈ ಬಗ್ಗೆ ಪತ್ರ ಬರೆಯುತ್ತೇವೆ. ತಕ್ಷಣವೇ, ಸಚಿವ ತಿಮ್ಮಾಪುರ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು.' ಎಂದು ಬಿಜೆಪಿ ನಾಯಕ ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದರು.

ರಾಜ್ಯಪಾಲರು ತಮ್ಮ ಮೂರು ಸಾಲಿನ ಭಾಷಣ ಮುಗಿಸಿ ನಿರ್ಗಮನ ದ್ವಾರದ ಕಡೆಗೆ ಸಾಗುತ್ತಿದ್ದಂತೆ, ಎಂಎಲ್‌ಸಿ ಹರಿಪ್ರಸಾದ್ ಸೇರಿದಂತೆ ಕೆಲವು ಆಡಳಿತ ಪಕ್ಷದ ಶಾಸಕರು ಘೋಷಣೆಗಳನ್ನು ಕೂಗುವ ಮೂಲಕ ಅವರನ್ನು ಘೇರಾವ್ ಮಾಡಲು ಪ್ರಯತ್ನಿಸಿದರು. ಅವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು.

ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ, ಎಂಎಲ್‌ಸಿ ಸಿಟಿ ರವಿ, ಜೆಡಿಎಸ್ ಮತ್ತು ಬಿಜೆಪಿ ಶಾಸಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಸ್ಪೀಕರ್ ಖಾದರ್ ಪಾತ್ರ

**ಪ್ರದೇಶ ವಿಧಾನಸಭೆ ಸ್ಪೀಕರ್ ಸತೀಶ್ ಮಹಾನ ನೋಡಿ ಆಕರ್ಷಿತರಾಗಿದ್ದರು. ಇಂತಹದ್ದೇ ಪೀಠ ನಮಗೂ ಬೇಕು ಎಂದು ಬಯಸಿದ್ದರು. ಕರ್ನಾಟಕದ ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಅವರ ಜತೆ ಚರ್ಚಿಸಿದ ಬಳಿಕ ಮೈಸೂರಿನ ಮರದ ಕೆತ್ತನೆಕಾರ ಕೈಸರ್ ಆಲಿಖಾನ್ ಅವರಿಗೆ ಈ ಜವಾಬ್ದಾರಿ ವಹಿಸಲಾಯಿತು. ಈಗ ಉತ್ತರ ಪ್ರದೇಶದ ವಿಧಾನಸಭೆ ಸ್ಪೀಕರ್ ಅವರಿಗೆ ಪೀಠಾಸೀನ ಸಿದ್ಧಗೊಂಡು ಅಲ್ಲಿಗೆ ರವಾನಿಸಲಾಗಿದೆ. ಈ ಪೀಠ ಸಿದ್ಧಪಡಿಸುವ ನಿಟ್ಟಿನಲ್ಲಿ ರಾಜ್ಯದ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಪಾತ್ರವೂ ಮಹತ್ವದ್ದಾಗಿದೆ.**

## 6 ಸಾವಿರ ಗ್ರಾಪಂಗೆ ಗಾಂಧಿ ಹೆಸರು

ಹೊಸ ಕಾಯ್ದೆ ಪ್ರಕಾರ ಗ್ರಾಮ ಪಂಚಾಯಿತಿಗಳಿಗೆ ಯೋಜನೆ ನೀಡುವ ಅಧಿಕಾರವೇ ಇರುವುದಿಲ್ಲ. ಕೇಂದ್ರ ಸರ್ಕಾರದ ಅಧಿಕಾರಿಗಳೇ ದೆಹಲಿಯಲ್ಲಿ ಕುಳಿತು ಯೋಜನೆ ರೂಪಿಸಲಿದ್ದಾರೆ. ಯುಪಿಎ ಸರ್ಕಾರ ಯೋಜನೆಯನ್ನು ಜಾರಿಗೊಳಿಸದ ಉದ್ದೇಶವನ್ನೇ ಬಿಜೆಪಿ ಸರ್ಕಾರ ಬುಡಮೇಲು ಮಾಡಿದೆ ಎಂದು ಟೀಕಿಸಿದರು. ವಿಬಿ ಜಿ ರಾಮ್ ಜಿ ಯೋಜನೆ ರದ್ದುಗೊಳಿಸಿ ಮತ್ತು ಮನ್ರೇಗಾ ಯೋಜನೆ ಜಾರಿ ಮಾಡುವಂತೆ ಆಗ್ರಹಿಸಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ನೇತೃತ್ವದಲ್ಲಿ ಲೋಕಭವನಕ್ಕೆ ತೆರಳಿ ರಾಜ್ಯಪಾಲರಿಗೆ ಕಾಂಗ್ರೆಸ್ ನಾಯಕರು ಮತ್ತು ಸಚಿವರು ಮನವಿ ಸಲ್ಲಿಸಿದರು.

## ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ 'ಕೈಕೊಟ್ಟವರ' ಮಾಹಿತಿ: ಡಿಕೆಶಿ

ಯಾವ ಹಂತದಲ್ಲಿದೆ ಎಂದು ಎಐಸಿಸಿ ನಾಯಕರು ಮಾಹಿತಿ ಪಡೆದರು. ಗಾಂಧಿ ನಗರದಲ್ಲಿರುವ ಕಾಂಗ್ರೆಸ್ ಪಕ್ಷದ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಸಿದ್ಧವಾಗಿದೆ ಎಂದು ಅವರು ತಿಳಿಸಿದರು.

ಪಕ್ಷದ ರಾಜ್ಯ ಉಸ್ತುವಾರಿಯಾದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಕಾರ್ಯದರ್ಶಿಗಳಾದ ಅಭಿಷೇಕ್ ದತ್, ಗೋಪಿನಾಥ್ ಪಳನಿಸ್ವಾಮಿ, ಸಚಿವರಾದ ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ರಹೀಂ ಖಾನ್ ಭಾಗವಹಿಸಿದ್ದರು.

# ಪ್ರತಿಮೆ ನಿರ್ಮಾಣಕ್ಕೆ ಗುದ್ದಲಿಪೂಜೆ



ಗುಂಡ್ಲುಪೇಟೆ: ತಾಲೂಕಿನ ದೊಡ್ಡತುಪ್ಪೂರು ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣ ಕಾಮಗಾರಿಗೆ ಗ್ರಾಮಸ್ಥರು ಗುದ್ದಲಿ ಪೂಜೆ ನೆರವೇರಿಸಿದರು.

ದೊಡ್ಡತುಪ್ಪೂರು ಗ್ರಾಮದ ಪ್ರಮುಖ ವೃತ್ತದ ಬಳಿ ಡಾ.ಬಿ.ಆರ್.ಅಂಬೇಡ್ಕರ್ ರವರ ಪ್ರತಿಮೆ ನಿರ್ಮಾಣ ಮಾಡಲು ಗ್ರಾಮದ ಮುಖಂಡರು, ಸ್ಥಳೀಯ ಜನಪ್ರತಿನಿಧಿಗಳು ಮತ್ತು ಯುವಕರು ಮಹಾತ್ಮ ಗಾಂಧಿ, ಡಾ.ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷ ಪಾಪಣ್ಣ ಮಾತನಾಡಿ, ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣ ಮಾಡಬೇಕು ಎಂದು ಗ್ರಾಮಸ್ಥರು ಮತ್ತು ಯುವಕರು ಚರ್ಚೆ ನಡೆಸಿದ್ದೇವೆ. ನಮ್ಮ ಗ್ರಾಮದಲ್ಲಿ ವಿಶೇಷವಾಗಿ ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣವಾಗಲಿದೆ. ಎಲ್ಲರ ಸಹಕಾರವನ್ನು ಪಡೆದುಕೊಂಡು ನಮ್ಮ ಗ್ರಾಮದಲ್ಲಿ ಮಾದರಿಯಾಗಿ ಪ್ರತಿಮೆ ನಿರ್ಮಾಣ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಯಾವುದೇ ಕಾರಣಕ್ಕೂ ರಾಜಕಾರಣವನ್ನು ಮಾಡದೆ ಪ್ರತಿಮೆ ನಿರ್ಮಾಣಕ್ಕೆ ಪ್ರತಿಯೊಬ್ಬರು ಸಹಕರಿಸಬೇಕು ಎಂದು ಗ್ರಾಮಸ್ಥರಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ದೊಡ್ಡತುಪ್ಪೂರು ಗ್ರಾಮದ ಯಜಮಾನರು, ಯುವಕರು ಹಾಗೂ ಗ್ರಾಮಸ್ಥರು ಹಾಜರಿದ್ದರು.

# ಓಂಕಾರ್ ಸಿದ್ದೇಶ್ವರಸ್ವಾಮಿ ರಥೋತ್ಸವ



ಗುಂಡ್ಲುಪೇಟೆ: ತಾಲೂಕಿನ ಹೂಣಕನಪುರ ಗ್ರಾಮದ ಶ್ರೀ ಓಂಕಾರ್ ಸಿದ್ದೇಶ್ವರಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬಹಳ ವಿಜೃಂಭಣೆಯಿಂದ ಜರುಗಿತು

ಗುಂಡ್ಲುಪೇಟೆ ಹಾಗೂ ನಂಜನಗೂಡು ತಾಲೂಕಿನ 33 ಹಳ್ಳಿಗಳ ಜನರು ಜಾತ್ರೆಯಲ್ಲಿ ಬಾಗವಹಿಸಿದ್ದರು ಹೂರೆಯಾಲ. ಯಡವನಹಳ್ಳಿ. ಹಾಗೂ ಹೂಸಪುರ ಗ್ರಾಮಗಳಿಂದ ಮೂರು ರಥಗಳು ಅರೇಪುರ ಗ್ರಾಮದಿಂದ ವಾನ ಮತ್ತು ನಂಜನಗೂಡು ತಾಲೂಕಿನ ಕೂಗಲೂರು ಗ್ರಾಮ ದಿಂದ ವಾನಗಳು( ಛತ್ರಿ. ಚಾಮರ) ಓಂಕಾರ್ ಸಿದ್ದೇಶ್ವರ ದೇವಾಲಯದ ಅವರಣಕ್ಕೆ ಬಂದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಸಾವಿರಾರು ಮಂದಿ ಭಕ್ತರು ಓಂಕಾರ್ ಸಿದ್ದೇಶ್ವರ ಸ್ವಾಮಿ ತೇರಿಗೆ ಹಣ್ಣು ಜವನ ಎಸೆದು ಭಕ್ತಿ ಬಾವ ಸಮರ್ಪಿಸಿದರು ನಂತರ ದೇವರ ದರ್ಶನ ಪಡೆದು ಹರಕೆ ತಿರಿಸಿದರು

ಜಾತ್ರಾ ಮಹೋತ್ಸವದ ಹಿಂದಿನ ದಿನ ಜ. 25ರ ರಾತ್ರಿ ಓಂಕಾರ ಸಿದ್ದೇಶ್ವರ ಸ್ವಾಮಿಗೆ ರುದ್ರಾಭಿಷೇಕ ಸೇರಿದಂತೆ ವಿವಿಧ ಪೂಜಾ ಮತ್ತು ಅಭಿಷೇಕಗಳನ್ನು ಮಾಡಿ ಬೆಳ್ಳಿ ಕವಚ ಧಾರಣೆ ಮಾಡಲಾಯಿತು. ಜೊತೆಗೆ ದೇವಾಲಯವನ್ನು ತಳಿರು ತೋರಣ ವಿದ್ಯುತ್ ದೀಪಗಳಿಂದ ಆಲಂಕಾರ ಮಾಡಲಾಗಿತ್ತು ಜಾತ್ರೆ ನಿಮಿತ್ತ ಬೇಗೂರು ವೃತ್ತದ ಸರ್ಕಲ್ ಇನ್ಸ್ಪೆಕ್ಟರ್ ಮೋಹಿತ್ ಸಹದೇವ್ ಹಾಗೂ ಸಬ್ ಇನ್ಸ್ಪೆಕ್ಟರ್ ನವೀನ್ ನೇತೃತ್ವದಲ್ಲಿ ಬಂಧೋಬಸ್ತ್ ಒದಗಿಸಲಾಗಿತ್ತು. ಓಂಕಾರ ಸಿದ್ದೇಶ್ವರಸ್ವಾಮಿ ಜಾತ್ರೆಮಹೋತ್ಸವದಲ್ಲಿ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಪಾಲ್ಗೊಂಡು ದೇವರಿಗೆ ಪೂಜೆ ಸಲ್ಲಿಸಿದರು.ಹಾಗೂ ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್ ಬೇಟಿ ನೀಡಿದರು.ದೇವಸ್ಥಾನ ಅಡಳಿತ ಮಂಡಳಿಯ ಅಧ್ಯಕ್ಷರು ಸೇರಿದಂತೆ ವಿವಿಧ ಗ್ರಾಮದ ಸಾವಿರಾರು ಮಂದಿ ಭಕ್ತಾದಿಗಳು ಬಾಗವಹಿಸಿದರು

# ಸಂವಿಧಾನ ಬದುಕು ಕಟ್ಟುವ ಮಹಾನ್ ಗ್ರಂಥ

## ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಭಿಮತ




ರಾಮನಗರ: "ಸಂವಿಧಾನ ಸತ್ತವರ ಬಗ್ಗೆ ಬರೆದಿರುವ ಚರಿತ್ರೆಯಲ್ಲ, ಅದು ಭಾರತೀಯರ ಬದುಕು ಕಟ್ಟುವ ಮಹಾನ್ ಗ್ರಂಥ" ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರು ಹೇಳಿದರು.

ನಗರದಲ್ಲಿರುವ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ 77ನೇ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ತ್ರಿವರ್ಣ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಭಾರತದ ಸಂವಿಧಾನ ಸರ್ವ ಶ್ರೇಷ್ಠವಾಗಿದೆ, ಬಲಿಷ್ಠವಾಗಿದೆ ಎಂದರು.

ಬಲಿಷ್ಠ ಸಂವಿಧಾನ ಇಲ್ಲದ ಕಾರಣಕ್ಕೆ ಇಂದಿಗೂ ಭಾರತದ ಜೊತೆಯಲ್ಲಿ ಸ್ವಾತಂತ್ರ್ಯ ಪಡೆದಂತಹ ನೆರೆಯ ರಾಷ್ಟ್ರಗಳಲ್ಲಿ ಅರಾಜಕತೆ ಉಂಟಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಹಲವಾರು ಪ್ರಾಂತ್ಯಗಳು, ವಿವಿಧ ಧರ್ಮಗಳು, ವೈವಿಧ್ಯಮಯ ಸಂಸ್ಕೃತಿ ಒಳಗೊಂಡ ಭಾರತದಲ್ಲಿ ಸಂವಿಧಾನ ಜಾರಿಗೆ ಬಂದು 76 ವರ್ಷಗಳಿಸಿದರೂ ಈ ದೇಶ ದಿನದಿಂದ ದಿನಕ್ಕೆ ಬಲಿಷ್ಠವಾಗುತ್ತಿರುವುದನ್ನು ನೋಡಿದಾಗ ಅದಕ್ಕೆ ಮೂಲ ಕಾರಣ ನಮ್ಮ ಸಂವಿಧಾನ ಎಂದರೆ ಅತಿಶಯೋಕ್ತಿ ಎನಿಸಲಾರದು ಎಂದು ಅಭಿಪ್ರಾಯಪಟ್ಟರು.

ವಿವಿಧ ಧರ್ಮಗಳ ವೈವಿಧ್ಯಮಯವಾದ ಸಂಸ್ಕೃತಿಗಳ ಆಚರಣೆಗಳಿಂದ ಕೂಡಿರುವ ಭಾರತ ದೇಶಕ್ಕೆ, ಸಂವಿಧಾನವನ್ನು ರೂಪಿಸುವುದು ಅತ್ಯಂತ ಸವಾಲಿನ ಕೆಲಸವಾಗಿತ್ತು. ಸರ್ವಜನಾಂಗವು ಒಪ್ಪುವಂತಹ ಶ್ರೇಷ್ಠ ಸಂವಿಧಾನವನ್ನು ರೂಪಿಸುವಲ್ಲಿ ಶ್ರಮಿಸಿದ ಸಂವಿಧಾನ ರಚನಾ ಸಭೆಯ ಕರಡು ಸಮಿತಿಯ ನೇತೃತ್ವ ವಹಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಭಾರತದ 'ಸಂವಿಧಾನ ಶಿಲ್ಪಿ' ಎಂದು ಕರೆಯಲಾಗುತ್ತದೆ ಎಂದರು.

ಸಂವಿಧಾನದ ಪೀಠಿಕೆಯಲ್ಲಿ ತಿಳಿಸಿರುವಂತೆ ಸಮಾನತೆ, ಸಾಮಾಜಿಕ ನ್ಯಾಯ, ಭ್ರಾತೃತ್ವ ಭಾವನೆ, ಸಹಬಾಳ್ವೆಯೊಂದಿಗೆ ಮುನ್ನಡೆಯೋಣ, ಎಲ್ಲರೂ ಸಂವಿಧಾನವನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಂಡು ಮುನ್ನೆಡೆದರೆ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಹಾಗೂ ಸವಾಲುಗಳನ್ನು ಹಿಮ್ಮೆಟ್ಟಿಸಬಹುದು ಎಂದು ಕರೆ ನೀಡಿದರು.

ಗಣರಾಜ್ಯೋತ್ಸವದ ಅಂಗವಾಗಿ ಪೊಲೀಸ್ ಇಲಾಖೆ ಹಾಗೂ ವಿವಿಧ ಶಾಲೆ ವಿದ್ಯಾರ್ಥಿಗಳಿಂದ ಪಥಸಂಚಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್. ನಟರಾಜು ಗಾಣಕಲ್, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷ ಕೆ. ರಾಜು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಅಧ್ಯಕ್ಷ ಗಂಗಾಧರ್, ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ (ಶಶಿ), ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಚೇತನ್ ಕುಮಾರ್ ಎ.ಬಿ., ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್ ಗೌಡ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನ್ಮೋಲ್ ಜೈನ್, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಉಪವಿಭಾಗಾಧಿಕಾರಿ ಬಿನೋಯ್ ಸೇರಿದಂತೆ ಅಧಿಕಾರಿಗಳು ಹಾಗೂ ಗಣ್ಯರು ವೇದಿಕೆಯಲ್ಲಿದ್ದರು.

## "ಸಂವಿಧಾನದ ಅರಿವು" ಪುಸ್ತಕ ವಿತರಿಸಿ ಗಣರಾಜ್ಯೋತ್ಸವ ದಿನ

ರಾಮನಗರ: ರಾಷ್ಟ್ರಧ್ವಜವನ್ನು ಅನಾವರಣಗೊಳಿಸಿ, ಸಂವಿಧಾನದ ಅರಿವು ಎಂಬ ಪುಸ್ತಕವನ್ನು ವಿತರಿಸುವುದರ ಮೂಲಕ ನಗರದ ಬಾಲಗೇರಿಯ ಆದಿದ್ರಾವಿಡ ಕ್ಷೇಮಾಭಿವೃದ್ಧಿ ಸೇವಾ ಸಂಘ 77ನೇ ಸಂವಿಧಾನ ದಿನವನ್ನು ಆಚರಿಸಲಾಯಿತು.

ಈ ವೇಳೆ ಮಾತನಾಡಿದ ದಲಿತ ಮುಖಂಡ ಹರೀಶ್, ಕಳೆದೊಂದು ವರ್ಷದಿಂದ ಸಂಘ ಸಂವಿಧಾನದ ಕರ್ತೃ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಶೈಕ್ಷಣಿಕವಾಗಿ ತನ್ನದೇ ಆದ ಅಳಿಲು ಸೇವೆಯನ್ನು ಮಾಡುತ್ತಿದೆ. ಬಾಬಾ ಸಾಹೇಬರ ಆಶಯದಂತೆ ಸಂಘ ತನ್ನ ಚಟುವಟಿಕೆಗಳನ್ನು ನಡೆಸುತ್ತಿದೆ. ಈ ಚಟು ವಟಿಕೆಗಳು ಹೀಗೆ ಮುಂದುವರೆಯಲಿದೆ. ಸಂಘಟನೆ ಮತ್ತು ಚುರುಕುಗೊಳ್ಳಲಿದೆ ಎಂದರು.ಸಂವಿಧಾನದ ಬಗ್ಗೆ ಶಾಲಾ, ಕಾಲೇಜು ಮಕ್ಕಳು ಅರಿವು ಮೂಡಿ ಸಿಕೊಳ್ಳುವ ಅವಶ್ಯಕತೆ ಇದೆ. ಅಕ್ಕ ಐ.ಎ.ಎಸ್ ಅಕಾಡೆಮಿಯ ಮುಖ್ಯಸ್ಥರಾದ ಡಾ.ಶಿವಕುಮರ್ ಅವರು ಸಂವಿಧಾನದ ಅರಿವು ಎಂಬ ಪುಸ್ತಕವನ್ನು ರಚಿಸಿದ್ದಾರೆ. ಗಣರಾಜ್ಯೋತ್ಸವದ ಅಂಗವಾಗಿ ಈ ಪುಸ್ತಕವನ್ನು ಮಕ್ಕಳಿಗೆ ವಿತರಿಸಲಾಗಿದೆ ಎಂದರು. ಈ ಪುಸ್ತಕವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಜನರಿಗೆ ತಲುಪಿಸುವ ವ್ಯವಸ್ಥೆ ಮಾಡುವುದಾಗಿ ಹೇಳಿದರು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ರಾಜು, ಪ್ರಧಾನ ಕಾರ್ಯದರ್ಶಿ ಸಿ. ಪ್ರಭು, ಖಜಾಂಚಿ ಕೆ. ವೆಂಕಟೇಶ್, ಪ್ರಾಧಿಕಾರ ನಿರ್ದೇಶಕ ವಿ. ಶ್ರೀನಿವಾಸ್, ಕಟ್ಟಡ ಗುತ್ತಿಗೆದಾರ ಪ್ರಕಾಶ್, ಸಂಘದ ನಿರ್ದೇಶಕರಾದ ಮುತ್ತುರಾಜು, ಚಂದ್ರಶೇಖರ್, ಪ್ರಭು ಸದಸ್ಯರುಗಳಾದ ವೀರಸ್ವಾಮಿ, ಸಿ, ಕನ್ನಿಯಪ್ಪ, ಈಶ್ವರ, ಸಂತೋಷ್ ಮುಂತಾದವರು ಉಪಸ್ಥಿತರಿದ್ದರು.



# ಗಣರಾಜ್ಯೋತ್ಸವ: ಸ್ಕೇಟಿಂಗ್ ಮ್ಯಾರಥಾನ್



ಚಾಮರಾಜನಗರ : ಗಣರಾಜೋತ್ಸವ ಅಂಗವಾಗಿ ನಗರದ ಸ್ಕೇಟಿಂಗ್ ಅಸೋಸಿಯೇಷನ್ ವತಿಯಿಂದ ಸ್ಕೇಟಿಂಗ್ ಮ್ಯಾರಥಾನ್ ನಡೆಯಿತು.

ನಗರದ ಸುಲ್ತಾನ್ ಷರೀಫ್ ವೃತ್ತದ ನಮ್ಮ ಚೆಲುವ ಚಾಮರಾಜನಗರ ನಾಮಫಲಕದ ಮುಂಭಾಗದಲ್ಲಿ ಚಾಲನೆಗೊಂಡು ಅಲ್ಲಿಂದ ದೊಡ್ಡಂಗಡಿ ಬೀದಿ, ನಗರಸಭೆ, ಚಾಮರಾಜೇಶ್ವರ ದೇವಸ್ಥಾನ ರಸ್ತೆ ಮೂಲಕ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ಕರಾಟೆ ಪ್ರದರ್ಶನ, ಸ್ಕೇಟಿಂಗ್ ಪ್ರದರ್ಶನ ನಡೆಯಿತು. ನಂತರ ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತದ ಮುಖ್ಯಗೇಟ್ ಮುಂಭಾಗಕ್ಕೆ –ತೆರಳಿತು. ಮಕ್ಕಳಿಗೆ ಬಹುಮಾನ, ಪ್ರಶಸ್ತಿ ಪತ್ರ ವಿತರಿಸಲಾಯಿತು.

ಉದ್ಯಮಿ ಶ್ರೀನಿಧಿ ಸ್ಕೇಟಿಂಗ್ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿ, 77ನೇ ಗಣರಾಜ್ಯೋತ್ಸವ ಅಂಗವಾಗಿ ಸ್ಕೇಟಿಂಗ್ ಅಸೋಸಿಯೇಷನ್ ವತಿಯಿಂದ ಸ್ಕೇಟಿಂಗ್ ಮಾರಥಾನ್ ಅಯೋಜನೆ ಮಾಡಿರುವುದು ಒಂದು ಸಂತಸದ ಸಂಗತಿಯಾಗಿದೆ. ಗಣರಾಜ್ಯೋತ್ಸವ ದಿನ ಅಂದರೆ ಸಂವಿಧಾನ ಅರ್ಪಣೆ ಮಾಡಿದ ಒಂದು ಐತಿಹಾಸಿಕ ದಿನ. ಭಾರತ ಸಂವಿಧಾನ ದೇಶದ ಸರ್ವರಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ಒದಗಿಸಿದೆ. ಸ್ಕೈಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿರುವ ಮಕ್ಕಳು,. ಸ್ಕೇಟಿಂಗ್, ಶಿಕ್ಷಣದಲ್ಲಿ ಒಳ್ಳೆಯ ಸಾಧನೆ ಮಾಡಿ ಜಿಲ್ಲೆಗೆ ಕೀರ್ತಿ ತರಲಿ ಎಂದು ಶುಭ ಕೋರಿದರು. ಕಾರ್ಯಕ್ರಮದಲ್ಲಿ ಚೂಡಾ ಅಧ್ಯಕ್ಷ ಮಹಮ್ಮಅಸ್ಕರ್, ಅಂಕುರಂ ಶಾಲೆಯ ಆದರ್ಶ ಅರಸು, ಹಸಿರುಪಡೆ ಸತೀಶ್, ಕೌಶಲ್ಯ ಇಲಾಖೆ ಅನ್ಸಾರ್‌ಖಾನ್, ಸ್ಕೇಟಿಂಗ್, ಕರಾಟೆ ಕೋಚ್ ಪುರ್ಖಾನ್ ಹಾಗೂ ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು.

# ಅರಣ್ಯ ಇಲಾಖೆಗೆ ವಾಹನಗಳ ಹಸ್ತಾಂತರ



ರಾಮನಗರ: ಅರಣ್ಯ ಸಂರಕ್ಷಣೆ, ಜನಸಾಮಾನ್ಯರಿಗೆ ಸಹಾಯ ಮತ್ತು ರೈತರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆಗೆ ಸಹಾಯಕವಾಗುವಂತೆ ಎರಡು ಬೊಲೇರೋ ವಾಹನಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ. ಈ ವಾಹನಗಳನ್ನು ಡಿಸ್ಕವರಿ ವಿಲೇಜ್ ಸಂಸ್ಥೆ ತನ್ನ ಸಿ.ಎಸ್.ಆರ್. ನಿಧಿಯಡಿಯಲ್ಲಿ ನೀಡಿದೆ ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ನಗರದಲ್ಲಿರುವ ಜಿಲ್ಲಾ ಪಂಚಾಯ್ತಿ ಭವನದ ಆವರಣದಲ್ಲಿ ಅರಣ್ಯ ಉಪ ಸಂರಕ್ಷಣಾ ಪ್ರಾದೇಶಿಕ ವಿಭಾಗ ಹಾಗೂ ಕಾವೇರಿ ಅರಣ್ಯ ವನ್ಯಜೀವಿ ಉಪ ಸಂರಕ್ಷಣಾ ಭಿಭಾಗ, ಕೊಳ್ಳೇಗಾಲ ಇವರಿಗೆ ವಾಹನಗಳನ್ನು ವಿತರಿಸಿ ಅವರು ಮಾತನಾಡಿದರು.

ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಈ ವಾಹನಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸಾರ್ವಜನಿಕರಿಗೆ ಹಾಗೂ ರೈತರಿಗೆ ಅಗತ್ಯವಿರುವ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುವಂತೆ ಸೂಚಿಸಿದರು. ಡಿಸ್ಕವರಿ ವಿಲೇಜ್ ಸಂಸ್ಥೆಯ ಸಹ ಸಂಸ್ಥಾಪಕ ಪ್ರಶಾಂತ್ ಪ್ರಕಾಶ್ ಅವರ ಸೇವೆಯನ್ನು ಸಂಸದರು ಶ್ಲಾಘಿಸಿದರು. ಸಂಸ್ಥೆಯ ಸಾಮಾಜಿಕ ಬದ್ಧತೆ ಹಾಗು ಸೇವಾ ಮನೋಭಾವ ಪ್ರಶಂಸನೀಯ ಎಂದರು.

ವಾಹನಗಳ ಹಸ್ತಾಂತರದ ವೇಳೆ ಜಿಲ್ಲಾಧಿಕಾರಿ ಯಶವಂತ ವಿ. ಗುರುಕರ್, ಬಿಜೆಪಿ ಜಿಲ್ಲಾ ಅಧ್ಯಕ್ಷ ಆನಂದ್ ಸ್ವಾಮಿ, ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ಪ್ರಮುಖರಾದ ಗೌತಮ್ ಗೌಡ, ಪ್ರಸಾದ್ ಗೌಡ, ಉಮೇಶ್ (ಹೋಟೆಲ್) ಮುಂತಾದವರು ಹಾಜರಿದ್ದರು.

0000

## ಪತ್ನಿ ಸಾವು, ಪತಿಗೆ ಗಾಯ

ವೇಳೆ ಪಿರಿಯಾಪಟ್ಟಣ ಕಡೆಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತಿಮ್ಮಾಪುರ ರಾಜೀನಾಮೆಗೆ ಆಗ್ರಹ

ಹೊಣೆ ಹೊತ್ತು ತಿಮ್ಮಾಪುರ ಅವರಿಂದ ರಾಜೀನಾಮೆ ಪಡೆಯಲಿ. ತನಿಖೆ ಆಗಲಿ ಎಂದು ಆಗ್ರಹಿಸಿದರು. ಸಚಿವರು ರಾಜೀನಾಮೆ ಕೊಡುವವರೆಗೂ ನಾವು ಹೋರಾಟ ನಿಲ್ಲಿಸಲ್ಲ ಅಂತ ಎಚ್ಚರಿಕೆ ಕೊಟ್ಟರು.

## ಸಹಾಯ: ಮೈಕಲ್ ಬಂಧನ

ಪ್ರಕರಣ ದಾಖಲಾದ ಬಳಿಕ ಪರಾರಿಯಾಗಿದ್ದ. ಜಾಮೀನು ಪಡೆಯಲು ನಾನಾ ಕಸರತ್ತು ನಡೆಸಿದ್ದ. ಕೋರ್ಟ್ ಜಾಮೀನು ಅರ್ಜಿ ವಜಾಗೊಳಿಸಿದ ಬೆನ್ನಲ್ಲೇ ಬಂಧನ ಯಾವಾಗ ಎಂದು ಮಾಧ್ಯಮಗಳು ಸರ್ಕಾರವನ್ನು ಪ್ರಶ್ನಿಸುತ್ತಿದ್ದವು. ಕೊನೆಗೆ 13 ದಿನಗಳ ಬಳಿಕ ರಾಜೀವ್ ಗೌಡ ಬಂಧನವಾಗಿತ್ತು.

## ಮೈಸೂರಿನ ಕುರ್ಚಿ!

ಇಂದು ರಾಜ್ಯದ ಗಡಿ ದಾಟಿ ರಾಷ್ಟ್ರಮಟ್ಟದಲ್ಲಿ ತನ್ನ ಛಾಪು ಮೂಡಿಸುತ್ತಿದೆ. ಕೈಸರ್ ಅಲಿ ಖಾನ್ ಅವರಂತಹ ಶಿಲ್ಪಿಗಳ ಶ್ರಮ, ನೈಪುಣ್ಯ ಮತ್ತು ಕಲಾತ್ಮಕ ದೃಷ್ಟಿಕೋನದಿಂದ ಕರ್ನಾಟಕದ ಕೈಗಾರಿಕೆಗೆ ಹೊಸ ಗೌರವ ದೊರಕಿದೆ.

# ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವ




ಗುಂಡ್ಲುಪೇಟೆ: ಪಟ್ಟಣದಲ್ಲಿ ಹಿಂದೂ ಸಮಾಜ್ಯೋತ್ಸವ ಆಚರಣಾ ಸಮಿತಿಯ ವತಿಯಿಂದ ರಾಷ್ಟ್ರಿಯ ಸ್ವಯಂ ಸೇವಕ ಸಂಘದ ಶತಮಾನೋತ್ಸವದ ಕಾರ್ಯಕ್ರಮವನ್ನು ಪಟ್ಟಣ ವೀರಯೋಧ ಶಿವಾನಂದ ವೃತ್ತದಿಂದ ಹೊರಟು ಭಾರತಮಾತಾ ರಥಯಾತ್ರೆ ವಿವಿಧ ಕಲಾತಂಡಗಳೊಂದಿಗೆ ಕಿತ್ತೂರು ರಾಣಿ ಚೆನ್ನಮ್ಮ ರಸ್ತೆಯಲ್ಲಿ ಸಾಗಿ ಪಟ್ಟಣದ ಹೃದಯಭಾಗ ನೆಹರುಪಾರ್ಕ್ ಬಳಿ ಸಮಾಪನಗೊಂಡಿತು.

ನಂತರ ನೆಹರು ಪಾರ್ಕಿನ ಬಳಿ ಆಯೋಜಿಸಿದ್ದ ಹಿಂದು ಸಮಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ. ನಾಗಪುರ ರಾಷ್ಟ್ರಿಯ ಶಿಕ್ಷಣ ಮಂಡಲ ಪ್ರಧಾನ ಕಾರ್ಯದರ್ಶಿ ಶಂಕರಾನಂದ ಮಾತನಾಡಿ ಆಂಗ್ಲರ ಆಡಳಿತದಿಂದ ಸ್ವ ಆಡಳಿತಕ್ಕೆ ಭಾರತ ಬಂದರೂ ಅವರ ಕಾಲದ ಗುಲಾಮಗಿರಿಯ ಮನಸ್ಥಿತಿಯಲ್ಲೆ ನಾವಿದ್ದೇವೆ. ಸಂಘ ಶತಮಾನದ ಹರೆಯದಲ್ಲಿದೆ. ಭಾರತವೂ ಶತಮಾನೋತ್ಸವವನ್ನು 2047 ಕ್ಕೆ ಆಚರಿಸಿಕೊಳ್ಳುತ್ತದೆ ಈ ಎರಡರ ಮಧ್ಯೆ 21ವರ್ಷಗಳ ಕಾಲವಧಿಯಲ್ಲಿ ದೇಶದ ಜನರ ಗುಲಾಮಿ ಮಾನಸಿಕತೆಯನ್ನು ತೆಗೆದು ಹಾಕಲು ಹಿಂದು ಸಮಾಜ ಸಂಕಲ್ಪ ತಾಳಬೇಕಿದೆ. ಆಲಯ ಅಂದರೆ ಮನೆ, ವಿಶ್ವವಿದ್ಯಾಲಯ ಅಂದರೆ ಶಿಕ್ಷಣ ಕೇಂದ್ರಗಳು, ದೇವಾಲಯ ಅಂದರೆ ಮಠ ಮಂದಿರ ಪ್ರಾರ್ಥನಾ ಸ್ಥಳಗಳಲ್ಲಿ ದೇಶಿಯತೆ ತರಬೇಕು. ಮನೆಯಲ್ಲಿ ಸಂಸ್ಕಾರ ತುಂಬುವ ಮೂಲಕ , ದೇಶಿಯ ಆಹಾರ ವಿಹಾರಗಳ ಜೀವನಶೈಲಿ ನಮ್ಮದಾಗಬೇಕು. ಪರಿಸರ ಸಂರಕ್ಷಣೆ, ಹಿಂದು ಸಮಾಜದ ಪಿಡುಗಾಗಿರುವ ಅಸ್ಪೃಶ್ಯತೆಯನ್ನು ಬೇರುಸಹಿತ ಕಿತ್ತುಹಾಕುವ ಬದ್ಧತೆ ನಮದಾಗಬೇಕು. ಸಂವಿಧಾನದ ಘನತೆ ಎತ್ತಿ ಹಿಡಿವಂತೆ ಕಾನೂನುಗಳನ್ನು ಗೌರವಿಸುತ್ತಾ ಉಳಿದವರು ಪಾಲಿಸುವಂತೆ ಮಾಡುವ ಜವಾಬ್ಧಾರಿ ನಮ್ಮದು. ಸಂಘ ಈ ನಿಟ್ಟಿನಲ್ಲಿ ಈಗಾಗಲೇ ಕಾರ್ಯದಲ್ಲಿ ತೊಡಗಿದವರೊಂದಿಗೆ ಕೈಜೋಡಿಸುತ್ತಾ ಪಂಚ ಪರಿವರ್ತನೆಯ ಸಂಕಲ್ಪಿಸಿದೆ. ದೇಹ, ದೇಶವನ್ನು ದೇವರೆಂದು ಭಾವಿಸಿ ಸಮರ್ಪಿಸಿಕೊಂಡಾಗ ಸ್ವಯಂ ದೇಹವೇ ದೇವರಾಗುತ್ತದೆ. ದೇಶಕ್ಕಾಗಿ ಬದುಕುವ ಸಂಕಲ್ಪ ಮಾಡೋಣ ಎಂದು ಹೇಳಿದರು.

ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಹಂಗಳದ ಪಟ್ಟದ ಮಠದ ಪೂಜ್ಯ ಷಡಕ್ಷರ ಸ್ವಾಮಿಗಳು ಹಿಮವದ್ಗೋಪಾಲಸ್ವಾಮಿ ಬೆಟ್ಟದ ಪ್ರಧಾನ ಅರ್ಚಕರು ಮತ್ತು ಹಿಂದೂ ಸಮಾಜೋತ್ಸವ ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಭಟ್ಟರು ಹಂಗಳ ಗ್ರಾಮದ ಕೃಷಿಕರು ಎಪಿಎಂಸಿ ವರ್ತಕರ ಶ್ರೀಪ್ರಕಾಶ್ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ರಾಘವೇಂದ್ರ ಸ್ವಾಮಿ ಮಠದ ಶ್ರೀಮತಿರಾಜೇಶ್ವರಿ ಚಂದ್ರಶೇಖರ್, ಹಿಂದೂ ಸಮಾಜೋತ್ಸವ ಅಯೋಜನ ಸಮಿತಿ ಉಪಾಧ್ಯಕ್ಷ ಎ.ಪಿ.ಎಂ.ಸಿ ಕಾರ್ಮಿಕ ಮುಖಂಡ ಶಶಿಕುಮಾರ್ (ಎಈಅ) ಹಾಗೂ ಸಂಘ ಚಾಲಕ ಆನಂದ್ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಕರುನಾಡಿನಲ್ಲಿ ನೆಮ್ಮದಿಯ ಗ್ಯಾರಂಟಿ

## ಸರ್ವರ ಏಳ್ಗೆಗೆ ಸಹಕಾರ





- ರಾಜ್ಯದಲ್ಲಿ ವಾರ್ಷಿಕ ವಹಿವಾಟು **₹. 25,000 ಕೋಟಿ** ಜೊತೆಗೆ ಪ್ರತೀ ದಿನ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆ
- ಕ್ಷೀರಧಾರೆ ಯೋಜನೆಯಡಿ ಹಾಲು ಉತ್ಪಾದಕರಿಗೆ **ಪ್ರತಿ ಲೀಟರಿಗೆ ₹. 5 ಗಳ** ಪ್ರೋತ್ಸಾಹಧನ
- ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ರೈತರಿಗೆ ಅಗತ್ಯವಿರುವ ಬಂಡವಾಳವನ್ನ ಒದಗಿಸುವ ಸಲುವಾಗಿ ಮಾರ್ಚ್ 2025ರ ಅಂತ್ಯಕ್ಕೆ **59.39 ಲಕ್ಷ ರೈತರಿಗೆ** ಬೆಳೆ ಸಾಲ ವಿತರಣೆ ( ₹. 50,114 ಕೋಟಿ ವೆಚ್ಚ)
- ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ ಯೋಜನೆಯಡಿ **₹. 63.47 ಲಕ್ಷ ರೈತರಿಗೆ** ಆರ್ಥಿಕ ನೆರವು (₹. 2,605 ಕೋಟಿ ವೆಚ್ಚ)
- ನಾಡಿನ ಮಹಿಳೆಯರ ಸ್ವಾವಲಂಬಿ ಬದುಕಿಗೆ ಬೆಂಬಲವಾಗಿ ನಿಲ್ಲುವ ಉದ್ದೇಶದಿಂದ ಕಳೆದೆರಡು ವರ್ಷಗಳಲ್ಲಿ **42,341 ಸ್ವ ಸಹಾಯ ಗುಂಪುಗಳಿಗೆ** ಸಾಲ ವಿತರಣೆ (₹. 1,817 ಕೋಟಿ)
- 2024-25ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ, ಶೇಂಗಾ, ಹೆಸರುಕಾಳು, ಭತ್ತ ಸೇರಿದಂತೆ ಹಲವು ಕೃಷಿ ಉತ್ಪನ್ನಗಳನ್ನು ಖರೀದಿಸಲಾಗಿದ್ದು, ಒಟ್ಟಾರೆ **2,56,433 ರೈತರು** ಫಲಾನುಭವಿಗಳಾಗಿರುತ್ತಾರೆ.
- ಅನಧಿಕೃತವಾಗಿ ಕಾರ್ಯಾಚರಿಸುತ್ತಿರುವ ಗಿರವಿದಾರ ಸಂಸ್ಥೆಗಳು ಹಾಗೂ ಚೀಟಿ ಸಂಸ್ಥೆಗಳ ಮೇಲೆ ನಿಗಾ
- ಸಹಕಾರ ಸಂಘದ ನೇಮಕಾತಿಗಳಲ್ಲಿ ಸಹಕಾರ ಡಿಪ್ಲೋಮಾ, ಪದವಿ ಪಡೆದವರಿಗೆ ಆದ್ಯತೆ

## ಕರ್ನಾಟಕ ನವ ನಿರ್ಮಾಣಕ್ಕೆ ಗ್ಯಾರಂಟಿ ಸರ್ಕಾರ...

**ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಾ ನುಡಿದಂತೆ ನಡೆದು ಜನರ ವಿಶ್ವಾಸ ಗಳಿಸಿದ್ದೇವೆ.**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಬ್ರಾಹ್ಮಣ ಸಮುದಾಯ ಮಾಲೀಕತ್ವದ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

### ಶ್ರೀಮಹರ್ಷಿ ವಾಲ್ಮೀಕಿ ಕಪ್

## ಗೆದ್ದು ಬೀಗಿದ ಆತಿಥೇಯ ರಾಮಸಮುದ್ರ ಸುಬೇದಾರ್ ಟೈಗರ್ಸ್ ಕ್ರಿಕೆಟ್ ತಂಡ



ಚಾಮರಾಜನಗರ: ಆತಿಥೇಯ ರಾಮಸಮುದ್ರ ಸುಬೇದಾರ್ ಟೈಗರ್ಸ್ ಕ್ರಿಕೆಟ್ ತಂಡದವರು ಶ್ರೀಮಹರ್ಷಿ ವಾಲ್ಮೀಕಿ ಕಪ್ ಮುಡಿಗೇರಿಸಿಕೊಂಡು ಬೀಗಿ ಸಂಭ್ರಮಿಸಿತು.

ನಗರದ ರಾಮಸಮುದ್ರದ ದೀನಬಂಧು ಶಾಲೆಯ ಸಮೀಪದ ಮೈದಾನದಲ್ಲಿ ರಾಮಸಮುದ್ರ ಸುಬೇದಾರ್ ಟೈಗರ್ಸ್ ಕ್ರಿಕೆಟ್ ತಂಡದ ವತಿಯಿಂದ ಮೂರು ದಿನಗಳ ಕಾಲ ಅಯೋಜಿಸಿದ ಶ್ರೀಮಹರ್ಷಿ ವಾಲ್ಮೀಕಿ ಕಪ್ 2ನೇ ವರ್ಷದ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ನಲ್ಲಿ ಆತಿಥೇಯ ರಾಮಸಮುದ್ರ ಸುಬೇದಾರ್ ಟ್ರೈಗರ್ಸ್ ಕ್ರಿಕೆಟ್ ತಂಡ ಪ್ರಥಮ ಸ್ಥಾನ ಪಡೆದುಕೊಂಡದ್ದು, ಅತಿಥಿ ಹುರುಳಿನಂಜಪುರ ಧರ್ಮ ಕ್ರಿಕೆಟ್ ತಂಡ ದ್ವಿತೀಯ ಸ್ಥಾನಕ್ಕೆ ಪಡೆದುಕೊಂಡಿದೆ. ಮೈದಾನದಲ್ಲಿ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಟ್ರೋಫಿ, ಬಹುಮಾನ ವಿತರಿಸಿ ಮಾತನಾಡಿ, ಆತಿಥೇಯ ರಾಮಸಮುದ್ರ ಸುಬೇದಾರ್ ಟೈಗರ್ಸ್ ಕ್ರಿಕೆಟ್ ತಂಡ, ಅತಿಥಿ ಹುರುಳಿನಂಜಪುರ ಧರ್ಮ ಕ್ರಿಕೆಟ್ ತಂಡ ಉತ್ತಮ ಪ್ರದರ್ಶನ ನೀಡಿವೆ.ಕ್ರಿಕೆಟ್ ಆಟಗಾರರು ಸೋಲು–ಗೆಲುವು ಎರಡನ್ನು ಸಮವಾಗಿ ಸ್ವೀಕರಿಸಬೇಕು. ಸೋತವರು ಉತ್ತಮ ಅಭ್ಯಾಸದಲ್ಲಿ ತೊಡಗಬೇಕು. ಗೆದ್ದವರು ಕೂಡ ಇನ್ನೂ ಉತ್ತಮ ರೀತಿಯಲ್ಲಿ ಆಟ ಆಡುವುದನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕ್ರೀಡೆಯಲ್ಲಿ ಯಾವುದೇ ಜಾತಿ, ಧರ್ಮ ಇಲ್ಲ. ತಾವೆಲ್ಲರೂ ಸಹೋದರ ಮನೋಭಾವದಿಂದ ಕ್ರೀಡೆಯನ್ನು ಸ್ವೀಕರಿಸಬೇಕು. ಕ್ರೀಡೆಯಲ್ಲಿ ಸೋಲು–ಗೆಲುವು. ಇದ್ದೇಇರುತ್ತದೆ. ನಾವೆಲ್ಲರೂ ಶ್ರೀಮಹರ್ಷಿ ವಾಲ್ಮೀಕಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್, ಬುದ್ಧರು, ಬಸವೇಶ್ವರ ಸೇರಿದಂತೆ ಅನೇಕ ಮಹನೀಯರ ತುಂಬಾ ಕಷ್ಟದಿಂದ ಬೆಳೆದು ಬಂದು ದೇಶಕ್ಕೆ ಕೊಡುಗೆ ಕೊಟ್ಟಿದ್ದಾರೆ. ಕ್ರೀಡೆಯಿಂದ ದೈಹಿಕ, ಮಾನಸಿಕವಾಗಿ ಶಕ್ತಿವಂತರಾಗಿ ಉತ್ತಮ ಪ್ರಜೆಯಾಗಿ ರೂಪುಗೊಳ್ಳಲು ಸಾಧ್ಯ ಎಂದರು. ಕಾರ್ಯಕ್ರಮದಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಸುರೇಶ್, ಮಾಜಿ ಸದಸ್ಯ ಶಿವರಾಜ್, ಬಿಜೆಪಿ ಎಸ್‌ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಬುಲೆಟ್‌ಚಂದ್ರು, ತಾಲೂಕು ಸರ್ವೇಯರ್ ರಮೇಶ್, ಮುಖಂಡರಾದ ಬದನಗುಪ್ಪೆ ಶಿವರಾಮ್, ರವಿ, ನಟರಾಜು, ಸೋಮು, ರವಿ, ಅಯೋಜಕರಾದ ಪ್ರಜ್ವಲ್, ರಂಗಸ್ವಾಮಿ, ರವಿ, ಶಿಕ್ಷಕರಾದ ಮಹೇಶ್, ಲಿಂಗರಾಜು ಹಾಗೂ ಕ್ರಿಕೆಟ್ ಆಟಗಾರರು, ಕ್ರಿಕೆಟ್ ಪ್ರೇಮಿಗಳು ಭಾಗವಹಿಸಿದ್ದರು.

### ರಾಮನಗರದಲ್ಲಿ ಬ್ರೆಸ್ಟ್ ಮತ್ತು ಸರ್ವೈಕಲ್ ಕ್ಯಾನ್ಸರ್

## ಅರಿವು, ತಪಾಸಣಾ ಶಿಬಿರ

**ರೋಟರಿ ರಾಮನಗರ ಮತ್ತು ಆರ್ಯವೈಶ್ಯ ಸಂಘಟನೆಗಳಿಂದ ಶಿಬಿರ ಆಯೋಜನೆ**

**ಕರ್ನಾಟಕ ಕ್ಯಾನ್ಸರ್ ಸೊಸೈಟಿ ಮತ್ತು ಚಂದ್ರು ಡಯಾಗ್ನೋಸ್ಟಿಕ್ಸ್ ಸಹಕಾರ**



ರಾಮನಗರ: ರೋಟರಿ ರಾಮನಗರ, ವಾಸವಿ ವಿದ್ಯಾನಿಕೇತನ ಟ್ರಸ್ಟ್, ವಾಸವಿ ವನಿತಾ ಸಂಘಗಳು ಸಂಯುಕ್ತವಾಗಿ ಬ್ರೆಸ್ಟ್ ಕ್ಯಾನ್ಸರ್, ಸರ್ವೈಕಲ್ ಕ್ಯಾನ್ಸರ್‌ಗಳ ಬಗ್ಗೆ ಮಹಿಳೆಯರಿಗೆ ಅರಿವು ಮತ್ತು ತಪಾಸಣಾ ಶಿಬಿರವನ್ನು ಹಮ್ಮಿಕೊಂಡಿದ್ದವು.

ನಗರದ ಎಂ.ಜಿ.ರಸ್ತೆಯಲ್ಲಿರುವ ಶ್ರೀ ಕನ್ನಿಕಾಮಹಲ್‌ನಲ್ಲಿ ನಡೆದ ಈ ಶಿಬಿರವನ್ನು ಕರ್ನಾಟಕ ಕ್ಯಾನ್ಸರ್ ಸೊಸೈಟಿಯ ನೇತೃತ್ವದಲ್ಲಿ ಬೆಂಗಳೂರಿನ ರಾಜರಾಜೇಶ್ವರಿ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಯ ತಂಡ ನಡೆಸಿಕೊಟ್ಟರು. ಶಿಬಿರಕ್ಕೆ ಸಹಕಾರ ನೀಡಿದ್ದ ಚಂದ್ರು ಡಯೋಗ್ನೋಸ್ಟಿಕ್‌ನ ಮಾಲೀಕ ಚಂದ್ರೇಗೌಡ ಅವರು ಬ್ರೆಸ್ಟ್ ಕ್ಯಾನ್ಸರ್, ಸರ್ವೈಕಲ್ ಕ್ಯಾನ್ಸರ್‌ಗಳಿಗೆ ಕಾರಣವಾಗುವ ಅಂಶಗಳು, ಮುಂಜಾಗ್ರತೆಯಾಗಿ ಎಚ್ಚರಿಗೆ ವಹಿಸಬೇಕಾದ ಕ್ರಮಗಳು, ಈ ಎರಡೂ ಕ್ಯಾನ್ಸರ್‌ಗಳ ರೋಗ ಲಕ್ಷಣಗಳು, ಕ್ಯಾನ್ಸರ್ ಪತ್ತೆಗಾಗಿ ಆಗಿರುವ ವೈದ್ಯಕೀಯ ಪ್ರಗತಿ, ವಿಶ್ವ ಮತ್ತು ಭಾರತದಲ್ಲಿ ಏರುತ್ತಿರುವ ಬ್ರೆಸ್ಟ್ ಕ್ಯಾನ್ಸರ್ ಮತ್ತು ಸರ್ವೈಕಲ್ ಕ್ಯಾನ್ಸರ್ ಪ್ರಕರಣಗಳು ಹೀಗೆ ಹಲವಾರು ವಿಚಾರಗಳ ಬಗ್ಗೆ ಮಾತನಾಡಿ ನೆರೆದಿದ್ದ ಮಹಿಳೆಯರಲ್ಲಿ ಜಾಗೃತಿ ಮೂಡಿಸಿದರು.

100ಕ್ಕೂ ಹೆಚ್ಚು ಮಹಿಳೆಯರು ಈ ಶಿಬಿರದ ಉಪಯೋಗ ಪಡೆದುಕೊಂಡರು. ಈ ಪೈಕಿ 55 ಮಂದಿಗೆ ಥರ್ಮಲ್ ಸ್ಕ್ರೀನಿಂಗ್ ಮತ್ತು 45 ಮಹಿಳೆಯರ ಪ್ಯಾಪ್ ಸ್ಮಿಯರ್ ಪಡೆದುಕೊಳ್ಳಲಾಯಿತು. ಪ್ಯಾಪ್ ಸ್ಮಿಯರ್ ಅನ್ನು ಪ್ರಯೋಗಾಲಯದಲ್ಲಿ ತಪಾಸಣೆ ನಡೆಸಿ ಆಯಾ ಮಹಿಳೆಯರಿಗೆ ವರದಿ ತಲುಪಿಸುವುದಾಗಿ ಶಿಬಿರದ ಆಯೋಜಕರು ತಿಳಿಸಿದರು. ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯರಾದ ಮಹಾಲಕ್ಷ್ಮಿ, ಕರ್ನಾಟಕ ಕ್ಯಾನ್ಸರ್ ಸೊಸೈಟಿಯ ಪ್ರಮುಖರಾದ ನಾಗರತ್ನ, ರೋಟರಿ ರಾಮನಗರದ ಅಧ್ಯಕ್ಷರಾದ ಸೌಮ್ಯ ಕುಮಾರ್, ವಾಸವಿ ವನಿತಾ ಸಂಘದ ಅಧ್ಯಕ್ಷ ಶಾಂತ ನಾಗಪ್ರದೀಪ್, ವಾಸವಿ ವಿದ್ಯಾನಿಕೇತನ ಟ್ರಸ್ಟ್ ಅಧ್ಯಕ್ಷ ಬಿ.ಎಂ.ನಾಗರಾಜ ಶೆಟ್ಟಿ, ಆರ್ಯವೈಶ್ಯ ಸಭಾದ ಅಧ್ಯಕ್ಷ ಪಿ.ಜಿ.ಹರಿನಾಥ್ ಮುಂತಾದವರು ಉದ್ಘಾಟನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಶಿಬಿರಕ್ಕೆ ರಾಮನಗರ ಆರ್ಯ ವೈಶ್ಯ ಸಭಾ, ವಾಸವಿ ಭಜನಾ ಮಂಡಳಿ, ವಾಸವಿ ಯೂತ್ಸ್ ಫೋರಂ ಮತ್ತು ವಾಸವಿ ಕ್ಲಬ್ ರಾಮನಗರದ ಸದಸ್ಯರು ಸಹಕಾರ ನೀಡಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಕಲ್ಯಾಣ ವೆಂಕಟರಮಣ ಸ್ವಾಮಿ ಬ್ರಹ್ಮ ರಥೋತ್ಸವ



ಕೆ.ಆರ್.ಪೇಟೆ: ಹೇಮಾವತಿ ನದಿ ದಂಡೆಯಲ್ಲಿರುವ ಕೆ.ಆರ್.ಪೇಟೆ ತಾಲ್ಲೂಕಿನ ಸುಪ್ರಸಿದ್ಧ ಹೇಮಗಿರಿಯ ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿಯವರ ಬ್ರಹ್ಮ ರಥೋತ್ಸವವು ರಥಸಪ್ತಮಿಯ ಪವಿತ್ರ ದಿನವಾದ ಇಂದು ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಶಾಸಕ ಹೆಚ್.ಟಿ.ಮಂಜು ಮತ್ತು ತಹಸೀಲ್ದಾರ್ ಡಾ.ಎಸ್.ಯು.ಅಶೋಕ್ ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತಾದಿಗಳು ಬ್ರಹ್ಮರಥೋತ್ಸವದಲ್ಲಿ ಭಾಗವಹಿಸಿ ರಥಕ್ಕೆ ಹಣ್ಣು ಜವನ ಸಮರ್ಪಿಸಿ ವೆಂಕಟರಮಣ ಸ್ವಾಮಿ ಉಘೇ.. ಉಘೇ ಶ್ರೀನಿವಾಸ ಉಘೇ.. ಉಘೇ.. ಗೋವಿಂದ... ಉಘೇ ಉಘೇ.. ಎಂಬ ಜಯಘೋಷಗಳನ್ನು ಕೂಗುತ್ತಾ ರಥವನ್ನು ಎಳೆದು ತಮ್ಮ ಭಕ್ತಿ–ಭಾವ ಸಮರ್ಪಣ ಮಾಡಿದರು.

ರಥೋತ್ಸವ ಮತ್ತು ಉತ್ತಮ ರಾಸುಗಳನ್ನು ಕರೆತಂದ ಜಾತ್ರೆಯ ರಂಗನ್ನು ಹೆಚ್ಚಿಸಿದ ರೈತರಿಗೆ ಬಹುಮಾನ ವಿತರಣೆ ಮಾಡಿದ ನಂತರ ಮಾತನಾಡಿದ ಶಾಸಕ ಹೆಚ್.ಟಿ.ಮಂಜು ಜಾತ್ರೆ ರಥೋತ್ಸವಗಳು, ಹಬ್ಬ ಹರಿದಿನಗಳು ನಮ್ಮ ಸಂಸ್ಕೃತಿಯ–ಪರಂಪರೆಯ ಪ್ರತಿಬಿಂಬವಾಗಿವೆ. ಹಬ್ಬದ ಸಂಭ್ರಮದಲ್ಲಿ ಎಲ್ಲರೂ ಒಂದಾಗಿ ಭಾಗವಹಿಸುವುದರಿಂದ ಸ್ನೇಹ ಸಹಬಾಳ್ವೆಯು ಹೆಚ್ಚಾಗುವ ಮೂಲಕ ನೆಮ್ಮದಿಯ ಜೀವನಕ್ಕೆ ನಾಂಧಿಯಾಗಲಿದೆ. ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾದರೆ ಹಬ್ಬ ಹರಿದಿನ, ಜಾತ್ರೆ ಉತ್ಸವಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಮ್ಮ ತಾಲ್ಲೂಕಿನ ಹೇಮಗಿರಿ ಶ್ರೀ ಕ್ಷೇತ್ರದಲ್ಲಿ ನಡೆಯುವ ಭಾರಿ ದನಗಳ ಜಾತ್ರೆಯು ರಾಜ್ಯದ ವಿವಿಧ ಭಾಗಗಳಿಂದ ಲಕ್ಷಾಂತರ ರಾಸುಗಳು ಬರುತ್ತವೆ.

ಈ ಭಾರಿ ನಿಗಧಿತ ಸಮಯಕ್ಕೆ ಅಂದರೆ ಜ.17ರ ನಂತರ ಜಾತ್ರೆಗೆ ರಾಸುಗಳನ್ನು ಕರೆ ತರಬೇಕು ಎಂದು ತಾಲ್ಲೂಕು ಆಡಳಿತ ಮೂಲಕ ಹಲವು ಭಾರಿ ಸಭೆ ನಡೆಸಿ ಮನವಿ ಮಾಡಲಾಗಿತ್ತು. ಅದರಂತೆ ರೈತರು ಜ.17ರ ನಂತರ ಜಾತ್ರೆಗೆ ತಮ್ಮ ಜಾನುವಾರುಗಳನ್ನು ತಂದು ಕಟ್ಟುವ ಮೂಲಕ ಜಾತ್ರೆಯನ್ನು ಯಶಸ್ವಿಗೊಳಿಸಿದ್ದಾರೆ. ನಿಗಧಿತ ಅವಧಿಗೆ ಜಾತ್ರೆಗೆ ಆಗಮಿಸಿದ ರೈತರಿಗೆ ತಾಲ್ಲೂಕು ಆಡಳಿತ ರೈತರಿಗೆ ಯಾವುದೇ ತೊಂದರೆ ನೀಡದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಮೂಲಕ ಸಹಕಾರ ನೀಡಿರುವುದು ಶ್ಲಾಘನೀಯ ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಇದೇ ವೇಳೆ ಜಾತ್ರೆಗೆ ಆಗಮಿಸಿದ್ದ ಉತ್ತಮ ರಾಸುಗಳಿಗೆ ತಾಲ್ಲೂಕು ಆಡಳಿತ ಹಾಗೂ ಹೇಮಗಿರಿ ಸಕ್ಕರೆ ಕಾರ್ಖಾನೆಯ ಸಂಯುಕ್ತ ಆಶ್ರಯದಲ್ಲಿ ಸುಮಾರು 60ಕ್ಕೂ ಹೆಚ್ಚು ರೈತರಿಗೆ ಬಹುಮಾನ ವಿತರಣೆ ಮಾಡಲಾಯಿತು. ಹೇಮಗಿರಿ ಬೆಟ್ಟದ ಮೇಲೆ ನೆಲೆಸಿರುವ ಶ್ರೀ ರಂಗನಾಥಸ್ವಾಮಿಯ ದರ್ಶನ ಪಡೆದ ಭಕ್ತರು ಧನ್ಯರಾದರು. ಈ ಬಾರಿ ರಾಸುಗಳ ಜಾತ್ರೆಗೆ ತಾಲ್ಲೂಕು ಆಡಳಿತ ಸೂಕ್ತ ಮೂಲ ಸೌಕರ್ಯಗಳನ್ನು ಕೈಗೊಳ್ಳಲಾಗಿತ್ತು. ರೈತರು ಸಾವಿರಾರು ಸಂಖ್ಯೆಯಲ್ಲಿ ತಮ್ಮ ರಾಸುಗಳನ್ನು ಕರೆತಂದು ಸಾಂಪ್ರದಾಯಿಕ ದನಗಳ ಜಾತ್ರೆಯ ಹಿರಿಮೆಯನ್ನು ಹೆಚ್ಚಿಸಿದರು. ರಥೋತ್ಸವದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ದಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ಮಾಜಿ ಸಚಿವ ನಾರಾಯಣಗೌಡ, ಹೇಮಗಿರಿ ಸಕ್ಕರೆ ಕಾರ್ಖಾನೆಯ ಸೀನಿಯರ್ ಜನರಲ್ ಮ್ಯಾನೇ ಜರ್ ವರದರಾಜನ್, ಹಿರಿಯ ಕಬ್ಬು ಅಭಿವೃದ್ಧಿ ಅಧಿಕಾರಿ ದತ್ತಾತ್ರೇಯ, ಮಾನವ ಸಂಪನ್ಮೂಲ ಅಧಿಕಾರಿ ಶಿವರಾಂ, ತಾಲ್ಲೂಕು ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಹೆಚ್ .ಎಸ್.ದೇವರಾಜು, ಗ್ರಾ.ಪಂ.ಅಧ್ಯಕ್ಷೆ ಜಯಲಕ್ಷ್ಮೀ ಅಣ್ಣಪ್ಪ, ತಾಲ್ಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಉಪಾಧ್ಯಕ್ಷೆ ಲತಾಮಣಿ ಮಂಜೇಗೌಡ, ನಿರ್ದೇಶಕರಾದ ಮಲ್ಲೇನಹಳ್ಳಿ ಮೋಹನ್, ನಾಗರಘಟ್ಟ ದಿಲೀಪ್‌ಕುಮಾರ್, ಹೆಚ್.ಟಿ.ಲೋಕೇಶ್, ರಾಜ್ಯ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಮಹಾ ಮಂಡಳದ ಅಧ್ಯಕ್ಷ ಬಸ್ ಸಂತೋಷ್‌ಕುಮಾರ್, ಪಿಡಿಓ ನೂತನ್, ಕಸಬಾ ಹೋಬಳಿಯ ರಾಜಸ್ವ ನಿರೀಕ್ಷಕ ಜ್ಞಾನೇಶ್, ಗ್ರಾಮ ಲೆಕ್ಕಾಧಿಕಾರಿ ಮಲ್ಲಿಕಾರ್ಜುನ್, ಮುಜರಾಯಿ ಇಲಾಖೆಯ ವಿಷಯ ನಿರ್ವಾಹಕಿ ಪೂರ್ಣಿಮಾ, ಮುಖಂಡರಾದ ಮೀಸೆ ಮಹಾದೇವೇಗೌಡ, ಕಾಯಿ ಮಂಜೇಗೌಡ, ಕಿಕ್ಕೇರಿ ಮಂಜಣ್ಣ, ಭಾಗವಹಿಸಿದ್ದರು. ಜಾತ್ರಾ ಮಹೋತ್ಸವಕ್ಕೆ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ವೃತ್ತ ನಿರೀಕ್ಷಕ ಆನಂದೇಗೌಡ ನೇತೃತ್ವದಲ್ಲಿ ಸೂಕ್ತ ಬಂಧೋ ಬಸ್ತ್ ಕೈಗೊಳ್ಳಲಾಗಿತ್ತು.

# ಕಠಿಣ ಪರಿಶ್ರಮದಿಂದ ಯಶಸ್ಸು

## ಜಕ್ಕಳ್ಳಿ ಶಾಲೆಯಲ್ಲಿ ನಮ್ಮೂರ ಶಾಲೆ ಬಳಪ ಕಾರ್ಯಕ್ರಮ



ಚಾಮರಾಜನಗರ, ಕಠಿಣ ಪರಿಶ್ರಮ, ನಿರಂತರ ಅಭ್ಯಾಸ ಮತ್ತು ಏಕಾಗ್ರತೆಯಿಂದ ಓದಿದರೆ ಯಶಸ್ಸು ಲಭಿಸುತ್ತದೆ ಎಂದು ಕೊಳ್ಳೇಗಾಲ ವನ್ಯಜೀವಿ ವಲಯದ ವಲಯ ಅರಣ್ಯ ಅಧಿಕಾರಿ ಬಿ.ಎಸ್. ವಾಸು ತಿಳಿಸಿದರು.

ತಾಲೂಕಿನ ಜಕ್ಕಳ್ಳಿ ಶಾಲೆಯಲ್ಲಿ, ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ರೋಟರಾಕ್ಟ್ ಕ್ಲಬ್, ರಾಷ್ಟ್ರೀಯ ಸೇವಾ ಯೋಜನೆ, ರೋಟರಿ ಬೆಂಗಳೂರು ಮಾನ್ಯತಾ, ರೋಟರಿ ಬೆಂಗಳೂರು ಅಬ್ಬಿಗೆರೆ, ಕೆ.ಸಿ.ಸಿ ಪ್ರೈವೇಟ್ ಲಿಮಿಟೆಡ್, ಟ್ಯಾಗ್ ಅನ್ಲಿಮಿಟೆಡ್ ಮತ್ತು ಬಿ. ಆರ್ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ, ವನ್ಯಜೀವಿ ವಲಯ ಕೊಳ್ಳೇಗಾಲ ಇವರ ಸಹಯೋಗದಲ್ಲಿ ಆಯೋಜಿಸಿದ್ದ ನಮ್ಮೂರ ಶಾಲೆ ಬಳಪ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕರಳಕಟ್ಟೆ, ಜಕ್ಕಳ್ಳಿ, ಅರೇಪಾಳ್ಯ, ಎರೆಕಟ್ಟೆ ಹಾಗೂ ಹಿತ್ತಲದೊಡ್ಡಿ ಶಾಲೆಗಳ ಮತ್ತು ಅರಣ್ಯ ಇಲಾಖೆಯ ಹೊರಗುತ್ತಿಗೆ ನೌಕರರ ಮಕ್ಕಳು ಸೇರಿದಂತೆ ಒಟ್ಟು 236 ವಿದ್ಯಾರ್ಥಿಗಳಿಗೆ ಸಮವಸ್ತ್ರ, ಬ್ಯಾಗ್, ನೋಟ್ ಬುಕ್ ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ರಾಮಯ್ಯ ವಿಶ್ವವಿದ್ಯಾಲಯ ಬೆಂಗಳೂರು ರವರು, ಗ್ರಾಮೀಣ ಮತ್ತು ಕಾಡಂಚಿನ ಶಾಲೆಗಳನ್ನು ಗುರುತಿಸಿ, ಶಿಕ್ಷಣಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಪ್ರಶಂಸಿಸಿದರು. ಫಾದರ್ ಪೌಲ್ ಮಾತನಾಡಿ ಇಂತಹ ಕಾರ್ಯಕ್ರಮಗಳು, ವಿದ್ಯಾರ್ಥಿಗಳು ಮತ್ತು ಸ್ಥಳೀಯ ಸಮುದಾಯದ ಜನರಿಗೆ ಸಕಾರಾತ್ಮಕ ಪ್ರಭಾವ ಬೀರಿದ್ದು, ಸಮಾನತೆ ಹಾಗೂ ಶಿಕ್ಷಣದ ಮಹತ್ವದ ಕುರಿತು ಜಾಗೃತಿ ಮೂಡಿಸಿದೆ ಎಂದು ಹೇಳಿದರು.

ಕಾರ್ಯಕ್ರಮದ ಮುಖ್ಯಸ್ಥರಾದ ಡಾ. ದಾಮೋದರ್ ನಾಯಕ್ ರೋಟರಾಕ್ಟ್ ನ ಅಧ್ಯಕರಾದ ಕಾರ್ಕಲಾ ವೆನ್ನೆಲ್ಲಾ ಮಾತನಾಡಿ, ವಿದ್ಯಾರ್ಥಿಗಳು ಬೇರೆ ಕಡೆ ಗಮನ ಹರಿಸದೆ, ವಿದ್ಯಾಭ್ಯಾಸದ ಕಡೆ ಮನಸ್ಸನ್ನು ಕೇಂದ್ರೀಕರಿಸಬೇಕು ಎಂದು ಕರೆ ನೀಡಿದರು.

ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಆಟೋಟ ಮತ್ತು ಮನೋರಂಜನ ಸ್ಪರ್ಧೆಗಳನ್ನು ನಡೆಸಿ, ವಿಜೇತರಿಗೆ ಬಹುಮಾನವನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಸಹ ಪ್ರಾಧ್ಯಾಪಕ ಡಾ.ಪರಶುರಾಮನ್, ಉಪ ವ್ಯವಸ್ಥಾಪಕ ಶಿವರಾಜ್ ಕುಮಾರ್, ಮುಖ್ಯ ಶಿಕ್ಷಕಿ ಕುಮಾರಿ, ಸಹ ಶಿಕ್ಷಕರಾದ ಲಕ್ಷ್ಮೀ, ರಾಜು, ರಂಗರಾಜು, ಮಹೇಶ್, ಗಸ್ತು ಅರಣ್ಯಪಾಲಕರಾದ ಸುನಿಲ್ ಬಸಪ್ಪ ಬೆಳವಿ, ಸಂಜುನಾಥ ಆಯಟ್ಟಿ, ರಾಜು ಎಸ್, ಅರಣ್ಯ ವೀಕ್ಷಕ ಆಕಾಶ್ ಸೋಪಾನ ಜೋಷಿ, ಗ್ರಾಮಸ್ಥರು ಮತ್ತು ಇಲಾಖೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು

## ವೆಲ್ನೆಸ್ ಸೆಂಟರ್ ಪ್ರಾರಂಭ



ಮೈಸೂರು: ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್) ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯ ಮಾನಸಿಕ ಕ್ಷೇಮವನ್ನು ಬಲಪಡಿಸುವ ಉದ್ದೇಶದಿಂದ ಸಂಸ್ಥೆಯ ಆವರಣದಲ್ಲಿ ಸುಸಜ್ಜಿತ 'ವೆಲ್ನೆಸ್ ಸೆಂಟರ್' ಕ್ಷೇಮ ಕೇಂದ್ರವನ್ನು ಪ್ರಾರಂಭಿಸಿದೆ.

ಈ ಕೇಂದ್ರದ ಮೂಲಕ ಅರ್ಹ ಕ್ಲಿನಿಕಲ್ ಸೈಕಾಲಜಿಸ್ಟ್‌ಗಳ ನೆರವಿನಿಂದ ಮಾನಸಿಕ ಮೌಲ್ಯಮಾಪನ, ಆಪ್ತ ಸಮಾಲೋಚನೆ ಹಾಗೂ ವಿವಿಧ ಚಿಕಿತ್ಸಾ ವಿಧಾನಗಳನ್ನು ಒಳಗೊಂಡ ಸಮಗ್ರ ಮಾನಸಿಕ ಆರೋಗ್ಯ ಸೇವೆಗಳನ್ನು ಒದಗಿಸಲಾಗುವುದು. ಜೊತೆಗೆ ಮನೋವೈದ್ಯಕೀಯ ಸಮಾಲೋಚನೆಯನ್ನೂ ನೀಡುವ ಮೂಲಕ ಮಾನಸಿಕ ಆರೋಗ್ಯದತ್ತ ಸಮಗ್ರ ದೃಷ್ಟಿಕೋನವನ್ನು ಕೇಂದ್ರ ಹೊಂದಿದೆ. ಪ್ರೇರಣಾ ಆಸ್ಪತ್ರೆ ಮತ್ತು ನ್ಯೂರೋಕೇರ್‌ನ ನಿರ್ದೇಶಕ ಹಿರಿಯ ನರಮನೋವೈದ್ಯ ಡಾ.ಅಭಿಜಿತ್ ರಮಣ ಹೊನ್ನಗೊಡು ಇತೀಚೆಗೆ ವೆಲ್ನೆಸ್ ಕ್ಷೇಮ ಕೇಂದ್ರವನ್ನು ಉದ್ಘಾಟಿಸಿದರು. ಈ ಕೇಂದ್ರದಲ್ಲಿ ನಿಯಮಿತವಾಗಿ ಮನೋವೈದ್ಯಕೀಯ ಸಮಾಲೋಚನಾ ಸೇವೆಗಳನ್ನು ನೀಡಲು ಅವರು ಒಪ್ಪಿಗೆ ಸೂಚಿಸಿದ್ದು, ಇದರೊಂದಿಗೆ ಆಯಿಷ್ನ ಮಾನಸಿಕ ಆರೋಗ್ಯ ಸೇವಾ ವ್ಯವಸ್ಥೆ ಮತ್ತಷ್ಟು ಬಲಗೊಂಡಿದೆ.

ಕ್ಲಿನಿಕಲ್ ಸೈಕಾಲಜಿ ವಿಭಾಗದ ಮುಖ್ಯಸ್ಥ ಹಾಗೂ ವೆಲ್ನೆಸ್ ಸೆಂಟರ್‌ನ ಉಸ್ತುವಾರಿ ಡಾ.ಋಷಿ ಮಾತನಾಡಿ ದರು. ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಇತರರು ಇದ್ದರು.

## ವೇಶ್ಯಾವಟಿಕೆ ಅಡ್ಡೆದ ಮೇಲೆ ಪೊಲೀಸ್ ದಾಳಿ



ಗುಂಡ್ಲುಪೇಟೆ: ಪಟ್ಟಣದ ಜನತಾ ಕಾಲೋನಿಯ ಮನೆಯೊಂದರ ಮೇಲೆ ಪೋಲಿಸರು ದಾಳಿ ನಡೆಸಿ ಇಬ್ಬರು ಮಹಿಳೆಯರು ಹಾಗೂ ಇಬ್ಬರು ಪುರುಷರನ್ನ ವಶಕ್ಕೆ ಪಡೆದಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಇನ್ಸ್ಪೆಕ್ಟರ್ ಜಯಕುಮಾರ್ ನೇತೃತ್ವದಲ್ಲಿ ಪೋಲಿಸರು ದಾಳಿ ನಡೆಸಿ ಇಬ್ಬರ ಮಹಿಳೆಯರನ್ನ ರಕ್ಷಿಸಿದ್ದು ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಇಬ್ಬರು ಪುರುಷರನ್ನು ವಶಕ್ಕೆ ಪಡೆದಿದ್ದು ವೇಶ್ಯಾವಾಟಿಕೆ ನಡೆಸುತ್ತಿದ್ದ ಮನೆಯ ಮಾಲೀಕರನ್ನು ಪೋಲಿಸರು ಬಂಧಿಸಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ. ದಾಳಿ ವೇಳೆ ಪೋಲಿಸ್ ಸಬ್ ಇನ್ಸ್ಪೆಕ್ಟರ್ ನರೇಶ್ ಕುಮಾರ್, ನಟೇಶ್ ಎ ಎಸ್ ಐ ಮಹೇಶ್ ಇತರರು ಭಾಗವಹಿಸಿದ್ದರು

### ಅರಣ್ಯದಲ್ಲಿ ಪ್ಲಾಸ್ಟಿಕ್ ಸಂಗ್ರಹ ಅಭಿಯಾನ."

## ಒಂದು ಲಾರಿ ಲೋಡ್ ಪ್ಲಾಸ್ಟಿಕ್ ಸಂಗ್ರಹ



ಚಾಮರಾಜನಗರ: ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ನಿಂದ ಆಗುವ ದುಷ್ಪರಿಣಾಮಗಳ ಕುರಿತು ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಮರಿಯಾಲಬಸವರಾಜೇಂದ್ರ ಟ್ರಸ್ಟ್ ಹಾಗೂ ಚಾಮರಾಜನಗರ ಜೆಎಸ್‌ಎಸ್ ಮಹಿಳಾಕಾಲೇಜಿನ ಯುವರೆಡ್ ಕ್ರಾಸ್ ಘಟಕದ ವತಿಯಿಂದ ಜಿಲ್ಲೆಯ ಪ್ರಸಿದ್ಧ ಜಲಾಶಯಗಳಲ್ಲಿ ಒಂದಾದ ಸುವರ್ಣಾವತಿ ಜಲಾಶಯದ ಬಳಿಯಿಂದ ತಾಳವಾಡಿ ಕ್ರಾಸ್ ವರಗೆ ರಸ್ತೆ ಬದಿಯಲ್ಲಿ ಜನರು ಬಿಸಾಡಿದ್ದ ಪ್ಲಾಸ್ಟಿಕ್ ಹಾದು ಸಂಗ್ರಹಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು.

ಬಸವರಾಜೇಂದ್ರ ನರ್ಸಿಂಗ್ ಶಾಲೆ, ಜೆಎಸ್‌ಎಸ್ ಮಹಿಳಾ ಕಾಲೇಜಿನ ಯುವರೆಡ್ ಕ್ರಾಸ್ ಘಟಕದ ವಿದ್ಯಾರ್ಥಿಗಳು, ಭಾರತೀಯ ರೆಡ್ ಕ್ರಾಸ್ ಸೊಸೈಟಿ ಪದಾಧಿಕಾರಿಗಳು 3 ಕಿಲೋಮೀಟರ್ ವರೆಗೂ ನಡೆದುಕೊಂಡು ರಸ್ತೆಬದಿಯಲ್ಲಿ ಬಿಸಾಡಿದ್ದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಚೀಲದಲ್ಲಿ ತುಂಬಿ,ಲಾರಿಯೊಳಗಡೆ ಹಾಕಿದರು. 3ಕಿಮೀದೂರದವರೆಗೆ ಸಂಗ್ರಹವಾದ ಪ್ಲಾಸ್ಟಿಕ್ ಒಂದುಲಾರಿಭರ್ತಿಯಾಯಿತು. ಇದೇವೇಳೆ ಭಾರತೀಯ ರೆಡ್ ಕ್ರಾಸ್ ಸೊಸೈಟಿ ಜಿಲ್ಲಾಶಾಖೆ ಉಪಸಭಾಪತಿ, ಜಿಲ್ಲಾಸ್ಪತ್ರೆ ಅರವಳಿಕೆ ತಜ್ಞ ರಾದ ಡಾ.ಮಹೇಶ್ ಮಾತನಾಡಿ, ಕಾಡಂಚಿನಲ್ಲಿ ಪ್ಲಾಸ್ಟಿಕ್ ಬಿಸಾಡುವುದರಿಂದ ಕಾಡು ಪ್ರಾಣಿಗಳು ಅದಕ್ಕೆ ಬಾಯಿಹಾಕುವ ಸಂಭವವಿರುತ್ತದೆ. ಇದು ಕೊಳೆಯದ ಪದಾರ್ಥವಾಗಿರುವುದರಿಂದ ಪ್ರಾಣಿಗಳು ಮರಣಹೊಂದಲಿದ್ದು, ವನ್ಯಸಂಕುಲ ನಾಶವಾಗಲಿದೆ.

ವನ್ಯಜೀವಿಗಳ ಉಳಿವಿನ ದೃಷ್ಟಿಯಿಂದ ಕಾಡಂಚಿನ ಈ ಭಾಗದ ಗ್ರಾಮಸ್ಥರು. ವಾಹನಸವಾರರು. ಪ್ಲಾಸ್ಟಿಕ್ ಬಿಸಾಡಬಾರದು. ಪರಿಸರ ಸ್ನೇಹಿ ಬ್ಯಾಗ್ ಬಳಸಬೇಕು. ಇದರಿಂದ ನಾವು ಆರೋಗ್ಯವಂತರಾಗಬಹುದು, ಪರಿಸರವು ಉಳಿಯುತ್ತದೆ ಎಂದರು.ನಾವು ಹಮ್ಮಿಕೊಂಡಿರುವ ಪ್ಲಾಸ್ಟಿಕ್ ಸಂಗ್ರಹ ಅಭಿಯಾನವನ್ನು ಮೂರುದಿನಗಳ ಹಿಂದೆ ಆರಂಭಿಸಲಾಗಿದ್ದು. ಮುಂದಿನದಿನಗಳಲ್ಲೂ ಇದು ಮುಂದುವರೆಯಲಿದೆ ಎಂದರು. ಬಸವರಾಜೇಂದ್ರ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ ಡಾ.ಶ್ವೇತಾಶಶಿಧರ್ ಸೇರಿದಂತೆ ನರ್ಸಿಂಗ್ ವಿದ್ಯಾರ್ಥಿಗಳು, ಬಿಳಿಆರ್ಟಿ ಹುಲಿಸಂರಕ್ಷಿತಾರಣ್ಯ ಪ್ರದೇಶದ ಅರಣ್ಯಾಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

## ಡಾಲು ರವಿ, ಎಂ.ಹರೀಶ್ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಗೆಲುವು



ಕೆ.ಆರ್.ಪೇಟೆ,ತಾಲ್ಲೂಕಿನ ಕಸಬಾ ಹೋಬಳಿಯ ಮತ್ತಿಘಟ್ಟ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಎಲ್ಲಾ 9ಸ್ಥಾನಗಳಲ್ಲಿಯೂ ಮನ್ ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಹರೀಶ್ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ.

ಸಂಘದ ನೂತನ ಆಡಳಿತ ಮಂಡಳಿಯ 9ಸ್ಥಾನಗಳ ಪೈಕಿ ಎರಡು ಸ್ಥಾನಗಳು ಅವಿರೋಧ ಆಯ್ಕೆ ನಡೆದಿತ್ತು. 7ಸ್ಥಾನಗಳಿಗೆ ಚುನಾವಣೆ ನಡೆಯಿತು.

**ಗೆಲುವು ಸಾಧಿಸಿದ ನಿರ್ದೇಶಕರ ವಿವರ**

ಕುಮಾರ್, ಮಂಗಳಾಯೋಗೇಶ್, ಎಂ.ಎಸ್.ರಾಜು, ಸುತಕೀರ್ತಿ, ಎಂ.ಎಸ್.ನಾಗೇಂದ್ರ, ಲಲಿತಮ್ಮಗೋವಿಂದೇಗೌಡ, ಸಾಕಮ್ಮಗೋಪಾಲಗೌಡ, ಜವರಮ್ಮ ಬೋರಯ್ಯ(ಅವಿರೋಧ ಆಯ್ಕೆ), ಎಂ.ಟಿ.ಸತೀಶ್ (ಅವಿರೋಧ ಆಯ್ಕೆ) ಅವರು ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಯು.ಕೆ.ಪಾರ್ವತಮ್ಮ ತಿಳಿಸಿದ್ದಾರೆ. ಸದಹ ಚುನಾವಣಾಧಿಕಾರಿಗಳಾಗಿ ಸಂಘದ ಕಾರ್ಯದರ್ಶಿ ಸಾವಿತ್ರಿ ಕಾರ್ಯನಿರ್ವಹಣೆ ಮಾಡಿದರು. ನೂತನ ನಿರ್ದೇಶಕರನ್ನು ಮನ್‌ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ.ಹರೀಶ್, ಮುಖಂಡರಾದ ಯೋಗಣ್ಣ, ಸ್ವತಂತ್ರಪ್ಪ, ಜಯಕುಮಾರ್ (ಕಾಶಿ), ನಾಗೇಗೌಡ, ನಾಗರಾಜೇಗೌಡ, ಗೋಪಾಲ ಗೌಡ, ಶಿವಬಸಪ್ಪ, ಮರಿಯಪ್ಪ, ಗ್ರಾಮ ಪಂಚಾಯಿತಿ ನೌಕರ ಸಂಘದ ಜಿಲ್ಲಾ ಉಪಾಧ್ಯಕ್ಷ ವಾಟರ್ ಮ್ಯಾನ್ ಎಂ.ಕೆ.ಕುಮಾರ್, ಜಯರಾಮೇಗೌಡ, ಎಂ.ಎಸ್.ವಿಶ್ವನಾಥ್, ಮಂಜುನಾಥ್, ಶಿವಕುಮಾರ್, ಸಣ್ಣರಾಜೇಗೌಡ, ನಾರಾಯಣಗೌಡ, ಭೈರಯ್ಯ, ರಾಜೇಗೌಡ ಸೇರಿದಂತೆ ಮತ್ತಿಘಟ್ಟ ಗ್ರಾಮದ ಯಜಮಾನರು, ಯುವಕರು, ಹಾಲು ಉತ್ಪಾದಕರು ಅಭಿನಂದಿಸಿದ್ದಾರೆ.

### 77ನೇ ಗಣರಾಜ್ಯೋತ್ಸವ ದಿನಾಚರಣೆ

## ಸುಭದ್ರ ಪ್ರಜಾಪ್ರಭುತ್ವಕ್ಕೆ ಮತ ಚಲಾಯಿಸಿ



ಗುಂಡ್ಲುಪೇಟೆ. ಪಟ್ಟಣದ ಹಿಂದುಳಿದ ವರ್ಗ ಗಳ ಕಲ್ಯಾಣ ಇಲಾಖೆ ಅಸರೆ ಚಾರಿಟೇಬಲ್ ಟ್ರಸ್ಟ್.. ಸಂಪೂರ್ಣ ನಯನ ಫೌಂಡೇಶನ್. ಕ್ರಿಯಾ ಫೌಂಡೇಶನ್.ಇನ್ನರ್ ವೀಲ್ ಕ್ಲಬ್ ಅಫ್ ಬೆಂಗಳೂರು.ಇವರ ಸಂಯುಕ್ತ ಅಶ್ರಯದಲ್ಲಿ 77ನೇ ಗಣರಾಜ್ಯೋತ್ಸವ ದಿನಾಚರಣೆ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಮತ್ತು ರಾಷ್ಟ್ರೀಯ ಮತದಾರರ ದಿನಾಚರಣೆ ಕುರಿತು ವಿಶೇಷ ಕಾರ್ಯಕ್ರಮವನ್ನು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು

ನಂತರ ಜಿಲ್ಲಾ ಪಂಚಾಯತಿಯ ಜಿಲ್ಲಾ ತರಬೇತಿ ಸಂಯೋಜಕ ಟಿ ಜೆ ಸುರೇಶ್ ಮಾತನಾಡಿ ಸುಭದ್ರ ಪ್ರಜಾಪ್ರಭುತ್ವಕ್ಕೆ ಕಡ್ಡಾಯವಾಗಿ ಮತದಾರರು ತಮ್ಮ ಹಕ್ಕು ಚಲಾಯಿಸಬೇಕು. ಈ ನಿಟ್ಟಿನಲ್ಲಿ ಮತದಾರರಿಗೆ ಜಾಗೃತಿ ಮೂಡಿಸಲು ಪ್ರತಿವರ್ಷ ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನಾಚರಣೆ ಆಚರಿಸಲಾಗುತ್ತದೆಎಂದರು ನಮ್ಮ ರಾಷ್ಟ್ರದ ಸಂವಿಧಾನ ತನ್ನೆಲ್ಲ ಪ್ರಜೆಗಳಿಗೆ ವಯೋಮಾನದ ಅರ್ಹತೆಯ ಆಧಾರದ ಮೇಲೆ ನೀಡಿರುವ ಹಕ್ಕೆಂದರೆ ಓಟು ಚಲಾಯಿಸುವುದು.ಇದು ಪ್ರತೀ ಭಾರತೀಯನ ಹಕ್ಕು. ಇಂಥ ಹಕ್ಕನ್ನು ಯಾರೂ ಕಳೆದುಕೊಳ್ಳಬಾರದು.ನಾನು ಈ ರಾಷ್ಟ್ರದ ಪ್ರಜೆ, ರಾಷ್ಟ್ರ ನನಗೆ ಕೊಟ್ಟ ಹಕ್ಕು ಎಂಬ ನೆಲೆಯಲ್ಲಾದರೂ ಓಟು ಹಾಕಲೇಬೇಕು. ಸುಭದ್ರ ಪ್ರಜಾಪ್ರಭುತ್ವದಲ್ಲಿ ಆಡಳಿತ ನಿರ್ವಹಣೆ ಸರಿಯಾಗಿ ಸುಭದ್ರವಾಗಿರಬೇಕಾದರೆ ಮತದಾರರ ಪಾತ್ರ ಮುಖ್ಯವಾಗಿದ್ದು, ಮತದಾರರು ಮತದಾನದ ಮಹತ್ವ ಅರಿತು ಚುನಾವಣೆಯಲ್ಲಿ ಅರ್ಹ ವ್ಯಕ್ತಿಗಳಿಗೆ ಮತ ಚಲಾಯಿಸಬೇಕು. ಯಾವುದೇ ಆಮಿಷ ಗಳಿಗೆ ನಮ್ಮ ಓಟನ್ನು ನಾವು ಯಾರಿಗೂ ಮಾರಿಕೊಳ್ಳುವುದಿಲ್ಲವೆಂದು ಎಲ್ಲರೂ ದೃಢವಾಗಿ ನಿರ್ಧರಿಸಬೇಕು. ಆ ಬಗೆಯ ಮನಸ್ಥಿತಿ ವೈಯಕ್ತಿಕವಾಗಿಯೂ ಒಳ್ಳೆಯದಲ್ಲ, ಸಮಾಜಕ್ಕೂ ಹಿತವಲ್ಲ ಎಂದು ತಿಳಿಸಿದರು ಪ್ರಾಸ್ತಾವಿಕ ನುಡಿ ನುಡಿದ ಸಾಹಿತಿ ಕಾಳಿಂಗ ಸ್ವಾಮಿ ಸಿದ್ದಾರ್ಥ್ ನುಡಿದರು. ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಸಹಾಯಕ ನಿರ್ದೇಶಕ ಕೆ ಲೀಲು. ಸಂಪೂರ್ಣ ನಯನ ಫೌಂಡೇಶನ್ ಅಧ್ಯಕ್ಷೆ ರಜಿನಿ ತಿವಾರಿ. ಕೈಲಾಸ್ ಸತ್ಯಾರ್ಥಿ ಫೌಂಡೇಶನ್ ಸಂಯೋಜಕ ನಾರಾಯಣಸ್ವಾಮಿ ಜೆ ಸಿ.ಪುಣ್ಯಭೂಮಿ ಸಂಸ್ಥೆಯ ಬಿ ಶ್ರೀನಿವಾಸ್ ತಿವಾರಿ. ಗ್ರಾಮ ಮಾಜಿ ಅಧ್ಯಕ್ಷ ಅರ್ ಡಿ ಉಲ್ಲಾಸ್. ಗವಿಘರ್ಜನೆ ಪತ್ರಿಕೆ ಸಂಪಾದಕ. ಬಿ ಎಸ್ ಗವಿಸ್ವಾಮಿ ಸೇರಿದಂತೆ ಇನ್ನು ಇತರರು ಹಾಜರಿದ್ದರು

## ಸಂಕ್ಷಿಪ್ತ ಸುದ್ದಿ

### ಕಾಣೆಯಾದವರ ಪತ್ತೆಗೆ ಮನವಿ

**ಮೈಸೂರು:** ಜನವರಿ 21ರಂದು ಮಧ್ಯಾಹ್ನ–12.30 ಗಂಟೆಗೆ ಪಿರ್ಯಾದಿದಾರಾದ ಗೂರನಹಳ್ಳಿ ಗ್ರಾಮ, ವಾರ್ಡ್ ನಂ–ಟಿ. ಚೆನ್ನರಾಯಪಟ್ಟಣ ಟೌನ್‌ನ ಪದ್ಮ ರಾಮಚಂದ್ರ ರವರು ತಮ್ಮ ಪತಿ ರಾಮಚಂದ್ರ ರವರು ಕಾಣೆಯಾಗಿರುವುದಾಗಿ ದೂರು ನೀಡಿದ್ದು, ಕೆ ಆರ್ ನಗರ ಪೊಲೀಸ್ ಠಾಣಾ ಮೊ.ಸಂಖ್ಯೆ–28/2026 ಕಲಂ– ಪ್ರಕರಣ ದಾಖಲಾಗಿರುತ್ತದೆ.

ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂತವೇನೆಂದರೆ ಪದ್ಮ ರಾಮಚಂದ್ರ ರವರು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತಾರೆ. ಅವರ ಪತಿ ರಾಮಚಂದ್ರ ಟೈಲರಿಂಗ್ ಕೆಲಸ ಮಾಡಿಕೊಂಡಿದ್ದು, ಇತ್ತೀಚೆಗೆ ಕೆಲವು ದಿನಗಳಿಂದ ಕೆಲಸವನ್ನು ಬಿಟ್ಟು ಸಂಬಂಧಿಕರ ಮನೆಗಳಿಗೆ ಹೋಗಿ ಬರುತ್ತಿದ್ದರು. ಅದೇ ರೀತಿ ತಮ್ಮ ಕೆ ಆರ್ ನಗರ ಟೌನ್ ನ ಆಂಜನೇಯ ಬ್ಲಾಕ್‌ನಲ್ಲಿರುವ ತಮ್ಮ ಅತ್ತಿಗೆ ಮಂಜುಳ ನಾರಾಯಣ ರವರ ಮನೆಗೆ ಹೋಗಿ ಜನವರಿ 21 ರಂದು ರಾಮಚಂದ್ರ ರವರು ವಾಪಸ್ಸು ಊರಿಗೆ ಹೋಗುವುದಾಗಿ ಹೇಳಿ ಹೋಗಿದ್ದು, ಇದುವರೆಗೂ ಮನೆಗೆ ಬಂದಿರುವುದಿಲ್ಲ. ಎಲ್ಲಾ ಕಡೆ ಹುಡುಕಿದರು ರಾಮಚಂದ್ರ ರವರು ಪತ್ತೆಯಾಗದ ಕಾರಣ ಪದ್ಮ ರಮಚಂದ್ರರವರು ದೂರನ್ನು ನೀಡಿದ್ದಾರೆ.

ಚಹರೆ: ಹೆಸರು ರಾಮಚಂದ್ರ ಬಿನ್ ನಾರಾಯಣಪ್ಪ, ಸುಮಾರು 56 ವರ್ಷ, ಸಾಧಾರಣ ಮೈಕಟ್ಟು, ಸುಮಾರು 5.8 ಅಡಿ ಎತ್ತರ, ಮುಂಭಾಗದಲ್ಲಿ ತಲೆ ಕೂದಲು ಇರುವುದಿಲ್ಲ. ಎಡಗಾಲಿನಲ್ಲಿ ಹಳೆಯ ಗಾಯದ ಗುರುತು ಇರುತ್ತದೆ. ಕನ್ನಡವನ್ನು ಮಾತನಾಡುತ್ತಾರೆ. ಕೆ ಆರ್ ನಗರದಿಂದ ಹೋಗುವಾಗ ಬಿಳಿ ಬಣ್ಣದ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ.

ಸದರಿ ಚಹರೆಯುಳ್ಳ ವ್ಯಕ್ತಿಯು ಪತ್ತೆಯಾದಲ್ಲಿ ಕೆ ಆರ್ ನಗರ ಪೊಲೀಸ್ ಠಾಣೆಗಾಗಲಿ ಅಥವಾ ಮೈಸೂರು ಕಂಟ್ರೋಲ್ ರೂಂಗಾಗಲಿ ಅಥವಾ ಕೆ ಆರ್ ನಗರ ಪೊಲೀಸ್ ಠಾಣಾ ದೂರವಾಣಿ ಸಂಖ್ಯೆ–08223–263666 ಮತ್ತು 9480805036 ಹಾಗೂ ಜಿಲ್ಲಾ ಕಂಟ್ರೋಲ್ ರೂಂ ನಂಬರ್–0821–2418612 ಅನ್ನು ಸಂಪರ್ಕಿಸಿ ತಿಳಿಸಬೇಕಾಗಿ ಕೆ.ಆರ್ ನಗರ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಂಗಾಂಗದಾನ ಮಾಡಿದ ಕುಟುಂಬ ಸದಸ್ಯರಿಗೆ ಗೌರವ ಸಮರ್ಪಣೆ

**ಮೈಸೂರು:** ಮೈಸೂರು ಜಿಲ್ಲಾ ಆಡಳಿತ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಗಣರಾಜೋತ್ಸವ ವೇದಿಕೆ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆಯಲ್ಲಿ ಜು.2025 ರಿಂದ ಡಿ.2025 ಮಾಹೆಯ ವರೆಗೆ ಒಟ್ಟು ಒಬ್ಬರು ಅಂಗಾಂಗದಾನ ಮಾಡಿದ್ದು ಅವರ ಕುಟುಂಬ ಸದಸ್ಯರಿಗೆ ಗೌರವ ಸಮರ್ಪಣೆ ಮತ್ತು ಪ್ರಶಂಸನಾ ಪತ್ರ ನೀಡುವ ಕಾರ್ಯಕ್ರಮ ನಡೆಸಲಾಯಿತು.

ನಮ್ಮ ಜಿಲ್ಲೆಯಿಂದ ದಾನ ಮಾಡಿರುವ ಕುಟುಂಬ ಸದಸ್ಯರಿಗೆ ಗೌರವ ಸಮರ್ಪಣೆ ಮತ್ತು ಪ್ರಶಂಸನಾ ಪತ್ರವನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮಾಜ ಕಲ್ಯಾಣ ಸಚಿವರಾದ ಶ್ರೀಯುತ ಡಾ. ಹೆಚ್.ಸಿ.ಮಹದೇವಪ್ಪ ಅವರು ಗೌರವ ಸಮರ್ಪಣೆ ನಡೆಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|ಪಿ.ಸಿ.ಕುಮಾರಸ್ವಾಮಿ, ಅಂಗಾಗದಾನ ಜೀವಸಾರ್ಥಕತೆ ಕಾರ್ಯಕ್ರಮದ ಜಿಲ್ಲಾ ನೋಡಲ್ ಅಧಿಕಾರಿ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತರೋಗಗಳ ನಿಯಂತ್ರಣಾಧಿಕಾರಿ ಡಾ.ಸುವರ್ಣ ಸಿ.ರವರು ಹಾಗೂ ಕಛೇರಿಯ ಸಿಬ್ಬಂದಿ ಹಾಜರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು.

## ದೀಪ ದೀಪಗಳ ನಿರ್ವಹಣೆ ಇನ್ನು ಮುಂದೆ ನೀರುಗಂಟಿಗಳ ಹೆಗಲಿಗೆ : ಚಿಕ್ಕ ಲಿಂಗಯ್ಯ

# ಸಾರ್ವಜನಿಕರಿಗೆ ತೊಂದರೆಯಾಗದಂತೆ ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸಿ

**ಮಂಡ್ಯ:** 75 ವರ್ಷ ಮೇಲ್ಪಟ್ಟ ವಯಸ್ಕರ ಹೆಬ್ಬೆಟ್ಟಿನ ಗುರುತನ್ನು ಸ್ಕ್ಯಾನರ್ ಗಳು ಗುರುತಿಸಲು ಸಾಧ್ಯವಾಗುತ್ತಿಲ್ಲ ಹಾಗಾಗಿ ಪಡಿತರ ಪಡೆಯುವ ಸಂದರ್ಭದಲ್ಲಿ ವಯೋವೃದ್ಧರು ಪರದಾಡುವಂತಾಗಿದೆ ಸಂಬಂಧಪಟ್ಟ ಅಧಿಕಾರಿಗಳು 75 ವರ್ಷ ಮೇಲ್ಪಟ್ಟ ವಯಸ್ಕರಿಗೆ ಪಡಿತರ ಪಡೆಯಲು ಪರ್ಯಾಯ ವ್ಯವಸ್ಥೆ ಕಲ್ಪಿಸಿ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಿಕ್ಕಲಿಂಗಯ್ಯ ಅವರು ಹೇಳಿದರು.

ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಬಯೋಮೆಟ್ರಿಕ್ ತಗೆದುಕೊಂಡ ದಿನ ಪಡಿತರ ನೀಡಬೇಕು. ಪಡಿತರ ವಿತರಣೆ ಬೇಗ ಮಾಡಬೇಕು ಎಂದು ಹೇಳಿದರು.

ಅನ್ನಸುವಿಧ ಯೋಜನೆಯ ಮೂಲಕ 75 ವರ್ಷ ಮೇಲ್ಪಟ್ಟವರಿಗೆ ಈಗಾಗಲೇ ಪಡಿತರವನ್ನು ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ. ಕೆಲವರ ಬಳಿ ಮೊಬೈಲ್ ಇಲ್ಲದ ಕಾರಣ ಓಟಿಪಿ ಪಡೆದು ಪಡಿತರ ತಲುಪಿಸಲು ಸಾಧ್ಯವಾಗುತ್ತಿಲ್ಲ. ಪ್ರತಿ ನ್ಯಾಯಬೆಲೆ ಅಂಗಡಿಗಳಲ್ಲಿ ಓಟಿಪಿ ಮತ್ತು ಬಯೋಮೆಟ್ರಿಕ್ ಇಲ್ಲ ಶೇ 2 ರಷ್ಟು ಜನರಿಗೆ ಪಡಿತರವನ್ನು ವಿತರಿಸಲು ಅವಕಾಶವಿದೆ. ಮಾನವಿಯತೆ ದೃಷ್ಟಿಯಿಂದ ವಯಸ್ಕರಿಗೆ ಪಡಿತರವನ್ನು ನೀಡಿ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಐ.ಟಿ.ಜಿ.ಎಸ್.ಟಿ ಪಾವತಿ ಮಾಡುತ್ತಿರುವ ಬಿ.ಪಿ.ಎಲ್ ಕಾರ್ಡ್ ದಾರರನ್ನು ಎ ಪಿ ಎಲ್ ಪರಿವರ್ತಿಸಲಾಗಿದೆ. ಸದರಿ ಪಟ್ಟಿಯನ್ನು ಪರಿಶೀಲಿಸಿ ಐ.ಟಿ.ಜಿ.ಎಸ್.ಟಿ ಪಾವತಿಸದ ಅರ್ಹರನ್ನು ಎ.ಪಿ.ಎಲ್ ಪಟ್ಟಿಯಿಂದ ಕೈಬಿಡಿ. ಆರೋಗ್ಯದ ಸಮಸ್ಯೆ ಇರುವ ಅರ್ಹರಿಗೆ ಬಿ.ಪಿ.ಎಲ್ ಕಾರ್ಡ್ ನೀಡಲಾಗುತ್ತದೆ. ಆರೋಗ್ಯದ ಸಮಸ್ಯೆ ಇರುವವರಿಗೆ ಬಿ.ಪಿ.ಎಲ್ ಕಾರ್ಡ್ ನೀಡಲಾಗುತ್ತದೆ.



ಬಿ.ಪಿ.ಎಲ್ ಕಾರ್ಡ್ ನೀಡುವಲ್ಲಿ ವಿಳಂಬ ಮಾಡದೆ 15 ದಿನಗಳೊಳಗಾಗಿ ನೀಡಬೇಕು. ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 447166 ಅರ್ಹ ಫಲಾನುಭವಿಗಳು ಇದ್ದಾರೆ ಎಂದು ಹೇಳಿದರು.

ಗೃಹ ಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 464602 ಅರ್ಹ ಫಲಾನುಭವಿಗಳು ಇದ್ದು ತಲಾ ರೂ.2,000 ಗಳಂತೆ ಸೆಪ್ಟೆಂಬರ್ 2025 ರ ಅಂತ್ಯಕ್ಕೆ ಒಟ್ಟು ರೂ.2231 ಕೋಟಿಗಳನ್ನು ಪಾವತಿಸಲಾಗಿದೆ. ಅಕ್ಟೋಬರ್ ಮಾಹೆಯ ಹಣವನ್ನು ಬಿಲ್ ಮಾಡಲಾಗಿದ್ದು ಶೀಘ್ರವಾಗಿ ಅರ್ಹ ಫಲಾನುಭವಿಗಳ ಖಾತೆಗೆ ಹಣ ಜಮೆ ಆಗಲಿದೆ ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಕೆ ಹನುಮಂತಯ್ಯ ಅವರು ಮಾತನಾಡಿ ಗೃಹಜ್ಯೋತಿ ಯೋಜನೆಯಡಿ 499156 ಅರ್ಹ ಫಲಾನುಭವಿಗಳು ಇದ್ದು ಯೋಜನೆ ಪ್ರಾರಂಭವಾದಾಗಿನಿಂದ ಡಿಸೆಂಬರ್ 2025 ವರೆಗೆ ಜಿಲ್ಲೆಯಲ್ಲಿ ರೂ 511 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲೆಯ ಹಳ್ಳಿಗಳಲ್ಲಿ ಬೀದಿ ಬದಿಯ ದೀಪಗಳನ್ನು ಸರಿಯಾಗಿ ನಿರ್ವಹಣೆ ಮಾಡಲಾಗುತ್ತಿಲ್ಲ. ಬೆಳಗಿನ ಸಮಯದಲ್ಲೂ ದೀಪಗಳು ಉರಿಯುತ್ತಿದೆ. ಬೀದಿ ದೀಪಗಳನ್ನು ಆನ್ ಮತ್ತು ಆಫ್ ಮಾಡಲು ನೀರುಗಂಟಿಳಿಗೆ ಜವಾಬ್ದಾರಿ ವಹಿಸಿ ಎಂದು ಹೇಳಿದರು.

ರೈತರು ತಮ್ಮ ಗದ್ದೆ ಹೊಲಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಟಿ.ಸಿ ಮತ್ತು ಕಂಬಗಳನ್ನು ಕಲ್ಪಿಸಲು ತಗುಲುವ ವೆಚ್ಚದ ಕುರಿತು ರೈತರಿಗೆ ಮಾಹಿತಿ ನೀಡಿ. ಗುತ್ತಿಗೆದಾರರು ಟಿ.ಸಿ ಮತ್ತು ಕಂಬಗಳನ್ನು ನೀಡಲು ಸರ್ಕಾರ ನಿಗದಿಪಡಿಸಿದ ಮೊತ್ತಕ್ಕಿಂತ ಹೆಚ್ಚಿನ ಹಣದ ಬೇಡಿಕೆ ಇಟ್ಟರೆ ಅಂತಹ ಗುತ್ತಿಗೆದಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಿ ಎಂದರು.

ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ 18.64 ಕೋಟಿಗೂ ಹೆಚ್ಚಿನ ಮಹಿಳೆಯರಿಗೆ ಟಿಕೇಟ್ ವಿತರಿಸಲಾಗಿದೆ. ಇದರಿಂದ ನಿಗಮಕ್ಕೆ ರೂ 511 ಕೋಟಿಗೂ ಅಧಿಕ ಆದಾಯ ಲಭಿಸಿದೆ. ಬೇರೆ ಜಿಲ್ಲೆಯ ಘಟಕದ ಎಕ್ಸ್‌ಪ್ರೆಸ್ ಬಸ್ ಗಳು ಮಂಡ್ಯದಲ್ಲಿ ನಿಲ್ಲಿಸುತ್ತಿಲ್ಲ ಇದರಿಂದ ಪ್ರಯಾಣಿಕರಿಗೆ ತೊಂದರೆ ಉಂಟಾಗುತ್ತಿದೆ. ಬೇರೆ ಜಿಲ್ಲೆಯ ಘಟಕದ ಬಸ್ ಗಳು ಮಂಡ್ಯದಲ್ಲಿ ನಿಲ್ಲಿಸುವಂತೆ ನೋಡಿಕೊಳ್ಳಿ ಎಂದು ಹೇಳಿದರು.

ಮಂಡ್ಯ ಘಕಟದ ಬಸ್ ಗಳನ್ನು ಮೈಸೂರು – ಮಂಡ್ಯ ಮಾರ್ಗ ಬಿಡಿ ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ ಮಂಡ್ಯದಿಂದ ಮೈಸೂರಿಗೆ ತೆರಳುವ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಮಂಡ್ಯ ಘಟಕಕ್ಕೆ ಹೊಸ ಬಸ್ಗಳು ಬಂದ ತಕ್ಷಣ ಮಂಡ್ಯ – ಮೈಸೂರು ಬಸ್ ವ್ಯವಸ್ಥೆ ಕಲ್ಪಿಸಿ ಪ್ರಯಾಣಿಕರಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ವಹಿಸಿ ಎಂದು ಹೇಳಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ರಾಜೇಂದ್ರ ಎಸ್.ಹೆಚ್ ಅವರು ಮಾತನಾಡಿ ಯುವ ನಿಧಿ ಯೋಜನೆಯಡಿ ಜಿಲ್ಲೆಯಲ್ಲಿ 6730 ಫಲಾನುಭವಿಗಳು ನೊಂದಣಿಯಾಗಿದ್ದು ಸೆಪ್ಟೆಂಬರ್ 2025 ರ ವರೆಗೂ 18.73 ಕೋಟಿ ಅನುದಾನವನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ. ಅಕ್ಟೋಬರ್ ನವೆಂಬರ್ ಮಾಹೆ ಹಣವನ್ನು ಬಿಲ್ ಮಾಡಲಾಗಿದ್ದು ಶೀಘ್ರವೇ ಪಾವತಿಸಲಾಗುವುದು ಎಂದು ಹೇಳಿದರು.

ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿ ಯುವನಿಧಿ ಯೋಜನೆಯ ಕುರಿತಾಗಿ ಹೆಚ್ಚಿನ ಪ್ರಚಾರ ಕೈಗೊಳ್ಳಿ. ಎಲ್ಲಾ ಕಾಲೇಜುಗಳಲ್ಲಿ ಯುವನಿಧಿ ಯೋಜನೆ ಕುರಿತು ಸೂಚನಾ ಫಲಕಗಳನ್ನು ಅಳವಡಿಸಿ ಅರಿವು ಮೂಡಿಸಿ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಶಿವಣ್ಣ, ಜಿಲ್ಲಾ ಪಂಚಾಯತ್ ಯೋಜನಾಧಿಕಾರಿ ಧನುಷ್, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸದಸ್ಯರುಗಳಾದ ಅಜಯ್ ಕುಮಾರ್ ಬಿ.ಪಿ, ಎ.ಬಿ ಕುಮಾರ, ಕೆ. ರುದ್ರಪ್ಪ, ವೀಣಾ ,ಶಂಕರೇಗೌಡ, ಬಸವರಾಜು, ಮಹಮದ್ ಅನ್ಸರ್, ರಮೇಶ್ ಬಿ.ಎಂ, ಪಿ ಮಾದೇಶ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸಿ: ಡಾ.ಹೆಚ್.ಸಿ.ಎಂ



**ಮೈಸೂರು:** ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು.ಆದ್ದರಿಂದ ಮಕ್ಕಳಿಗೆ ಉತ್ತಮ, ಗುಣಮಟ್ಟದ ಶಿಕ್ಷಣ ನೀಡಿ ಅವರನ್ನು ಉನ್ನತ ಸ್ಥಾನಕ್ಕೇರುವಲ್ಲಿ ರೂಪಿಸುವ ಕಾರ್ಯಕ್ಕೆ ಶಿಕ್ಷಕರು ಮುಂದಾಗಬೇಕೆಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ ನೀಡಿದರು.

ಹೂಟಗಳ್ಳಿಯ ಕೆ.ಹೆಚ್.ಬಿ ಕಾಲೋನಿಯಲ್ಲಿರುವ ಸುದರ್ಶನ್ ವಿದ್ಯಾ ಸಂಸ್ಥೆಯ ವಾರ್ಷಿಕೋತ್ಸವ ಹಾಗೂ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಆಡಳಿತಾಧಿಕಾರಿಗಳೂ ಹಾಗೂ ಸುದರ್ಶನ್ ವಿದ್ಯಾಸಂಸ್ಥೆಯ ಮುಖ್ಯಸ್ಥರೂ ಆಗಿರುವ ಡಾ.ಎನ್.ಶ್ರೀನಿವಾಸನ್ ಅವರ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ, ಸಂವಿಧಾನದ ಒಲವಿನಂತೆ ಶಿಕ್ಷಣದಲ್ಲಿ ವೈಚಾರಿಕತೆ, ವೈಜ್ಞಾನಿಕತೆ ಬಿತ್ತುವ ಮುಖೇನ ಮೂಢನಂಬಿಕೆಯಿಂದ ದೂರವಿರುವ ಬಗ್ಗೆ ಅರಿವು ಮೂಡಿಸಬೇಕೆಂದ ಸಚಿವರು, ಶಿಕ್ಷಣ ಮಾತ್ರವೇ ಕತ್ತಲಿನಿಂದ ಬೆಳಕಿನಡೆಗೆ ಇರುವ ಮಾರ್ಗ.ಅಂತೆಯೇ ಗುಣಮಟ್ಟದ ಶಿಕ್ಷಣ ಕಲ್ಪಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ಶ್ರಮಿಸುತ್ತಿರುವ ಶ್ರೀನಿವಾಸನ್ ಶ್ರಮ ಅಪಾರ ಎಂದು ಸಂತೋಷದಿಂದ ನುಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥ ಡಾ.ಎನ್.ಶ್ರೀನಿವಾಸನ್, ಮುಖ್ಯ ಶಿಕ್ಷಕ ಸುರೇಶ್,ಶಿಕ್ಷಣ ಸಂಘದ ನೇಹಾ ಪ್ರಕಾಶ್, ಮುಖ್ಯೋಪಧ್ಯಾಯಿನಿ ವಿನೂತ ಸೇರಿ ಇತರರು ಉಪಸ್ಥಿತರಿದ್ದರು.

## ಕಲೆ – ಕೌಶಲ್ಯ ಹೊಂದಿರುವವರಿಗೆ ಉತ್ತೇಜನ ನೀಡಿ : ಕುಮಾರ

**ಮಂಡ್ಯ:** ಸಾಮಾಜಿಕ ವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಸಮಾಜದ ಮುಖ್ಯ ವಾಹಿನಿಗೆ ಬರಬೇಕು. ಸಮುದಾಯಗಳು ಮುಖ್ಯ ವಾಹಿನಿಗೆ ಬರಲು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಜಿಲ್ಲಾಧಿಕಾರಿ ಡಾ ಕುಮಾರ್ ರವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಡ್ಯ ಇವರ ಸಹಯೋಗದಲ್ಲಿ ಮಂಗಳವಾರ ಸವಿತಾ ಮಹರ್ಷಿ ಜಯಂತಿಯ ಆಚರಣೆಯನ್ನು ಮಂಡ್ಯ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ದೀಪ ಬೆಳಗಿಸಿ ಸವಿತಾ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿ ಸಮಾಜದ ಉದ್ಧಾರಕ್ಕಾಗಿ ಅಪಾರ ಜ್ಞಾನವನ್ನು ರೂಡಿಸಿಕೊಂಡು ಜ್ಞಾನವನ್ನು ಪಸರಿಸುವ ಮೂಲಕ ಸಮಾಜಕ್ಕೆ ಬೆಳಕದವರು. ಸವಿತಾ ಮಹರ್ಷಿ ರವರು ಅವರ ಆದರ್ಶಗಳನ್ನು ಮೌಲ್ಯ ಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಪೌರಾಣಿಕ ವ್ಯಕ್ತಿಯಾಗಿ ದೇವತಾ ಪುರುಷನಾಗಿ ಸಮಾಜಕ್ಕೆ ನೀಡಿರುವ ಕೊಡುಗೆಗಳು ಮತ್ತು ಸಂದೇಶಗಳು ಅಪಾರ. ದೇಶದ ಸಂಸ್ಕೃತಿ ಗೆ

ನಾಲ್ಕನೇ ವೇದವಾದ ಸಾಮ ವೇದವನ್ನು ಬರೆದವರು ಮತ್ತು ಗಾಯಿತ್ರಿ ಮಂತ್ರವನ್ನು ಉಪದೇಶ ಮಾಡಿದವರು



ಹಾಗೂ ಜ್ಞಾನದ ಮೂಲಕ ಮಾತ್ರ ಸಾಧನೆ ಮಾಡಬಹುದು, ಸವಿತಾ ಮಹರ್ಷಿ ಸಮುದಾಯದವರು ಕಾಯಕ ಯೋಗಿಗಳು ಎಂದು ಅಭಿಪ್ರಾಯಪಟ್ಟರು

ಸವಿತಾ ಸಮಾಜದ ಪ್ರತಿಯೊಬ್ಬರೂ ಕೂಡ ಕೌಶಲ್ಯ ಮತ್ತು ಕಾಯಕವನ್ನು ಬಹಳ ನಿಷ್ಠೆ ಮತ್ತು ಪ್ರಾಮಾಣಿಕತೆ, ಸಮಾನತೆಯಿಂದ ಕಾರ್ಯವನ್ನು ನಿರ್ವಹಿಸುತ್ತಾರೆ

ಯಾವುದೇ ತಾರತಮ್ಯ ವಿಲ್ಲದೆ ಸೇವಾ ಮನೋಭಾವದಿಂದ, ತಾರತಮ್ಯ ರಹಿತವಾಗಿ ನಿಸ್ಕಲ್ಮಷ ಹೃದಯದಿಂದ ಕೆಲಸವನ್ನು ಮಾಡುತ್ತಾರೆ ಎಂದರು.

ಕಲೆ ಮತ್ತು ಕೌಶಲ್ಯ ಹೊಂದಿರುವವರಿಗೆ ಹೆಚ್ಚು ಉತ್ತೇಜನವನ್ನು ಕೊಡಬೇಕು ಹಾಗೂ ಆಯುರ್ವೇದ ಗಿಡ ಮುಲಿಕೆಗನಿಂದ ಔಷಧಿಯನ್ನು ನೀಡಿ ರೋಗಗನ್ನು ಗುಣಪಡಿಸಿದ್ದಾರೆ. ಆದ್ದರಿಂದ ಹಿಂದಿನ ಪರಂಪರೆಯನ್ನು ಮತ್ತು ಸಂಪ್ರದಾಯವನ್ನು ಮರಿಯ ಬಾರದು, ಮೌಢ್ಯ ಮತ್ತು ಮೂಢನಂಬಿಕೆಗಳನ್ನು ಹೋಗಲಾಡಿಸಿ ಅವರವರ ವೃತ್ತಿಯನ್ನು ಗೌರವಿಸಬೇಕು ಎಂದರು.

ಪಿ ಇ ಎಸ್ ಪದವಿ ಪೂರ್ವ ಕಾಲೇಜಿನ ಡಾ ಅನಿತಾ ಎಂ. ಎಸ್ ರವರು ಮಾತನಾಡಿ ಸಮಾಜದ ಬದಲಾವಣೆಯು ಸವಿತಾ ಮಹರ್ಷಿ ಜಯಂತಿಯ ಆಶಯ. ಜಾತಿ, ವರ್ಗ, ಧರ್ಮ ಲಿಂಗ ತಾರತಮ್ಯ ವನ್ನು ಸಹಿಷ್ಣುತೆಯ ಸಮಾನತೆಯ ನಿರ್ಮಾಣ ಮಾಡಲು ಸವಿತಾ ಮಹರ್ಷಿ ಆಚರಣೆ ಮೂಲಕ ಸಮಾಸಮಾಜದ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸಬೇಕು ಪುರಾಣಪುರುಷ ನನ್ನ ಸಮುದಾಯದ ಮೂಲ ಪುರುಷ ಎಂದು ಉಪನ್ಯಾಸ ಮಾಡಿದರು.

ಕಾರ್ಯಕ್ರಮದಲ್ಲಿ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಡಾ. ಬಿ. ವಿ. ನಂದೀಶ,ಮಳವಳ್ಳಿ ತಾಲ್ಲೂಕು ಅಧ್ಯಕ್ಷರಾದ ಕೆಂಪರಾಜು ಮತ್ತು ಸುರೇಶ,ಮಂಜುನಾಥ್, ಸಂದೇಶ್, ಜಗದೀಶ್, ರಾಮಲಿಂಗಯ್ಯ ಸಮುದಾಯದ ಮುಖಂಡರು ಇನ್ನಿತರರಿದ್ದರು.

## ಮೂಗನಹುಂಡಿ ನೀರಾವರಿ ಯೋಜನೆ ಜಾರಿಗೆ ಶಾಸಕ ಜಿ.ಟಿ ದೇವೇಗೌಡ ಆಗ್ರಹ



**ಮೈಸೂರು:** ಬೋರ್ ವೆಲ್ ಗಳನ್ನು ಸಾವಿರ ಅಡಿ ಆಳ ಕೊರೆದರು ಅಂತರ್ಜಲವಿಲ್ಲದೆ ನೀರು ಸಿಗುತ್ತಿಲ್ಲ. ಜಾನುವಾರುಗಳಿಗೆ ಕುಡಿಯಲು ನೀರಿಲ್ಲ ಆದ್ದರಿಂದ ತುರ್ತಾಗಿ ಮೂಗನಹುಂಡಿ ಏತ ನೀರಾವರಿ ಯೋಜನೆಯನ್ನು ಅನುಷ್ಠಾನ ಗೊಳಿಸುವಂತೆ ಸಚಿವ ಬೋಸರಾಜ್ ರಲ್ಲಿ ಶಾಸಕ ಜಿ.ಟಿ.ದೇವೇಗೌಡ ಮನವಿ ಮಾಡಿದರು.

ವಿಧಾನಸಭೆ ಅಧಿವೇಶನದಲ್ಲಿ ಪ್ರಶ್ನೋತ್ತರ ಕಲಾಪದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಕೇಳಿದ ಅವರು, ನಮ್ಮದು ಖುಷ್ಕಿ ಪ್ರದೇಶವಾಗಿದ್ದು ಯಾವಾಗಲು ಮಳೆ ಬರುವುದಿಲ್ಲ. ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೆಆರ್ ಎಸ್ ಆಣೆಕಟ್ಟಿನಿಂದ ಬಹಳಷ್ಟು ಹಳ್ಳಿಗಳು ಮುಳುಗಡೆಯಾಗಿರುತ್ತವೆ. ಕೆಆರ್ ಎಸ್ ನದಿ ತುಂಬಿದೆ. ಆದರೆ? ಕೆರೆಗಳಲ್ಲಿ ನೀರಿಲ್ಲದೆ ಅಂತರ್ಜಲ ಕುಸಿದ್ದಿದ್ದು ಮೈಸೂರು ತಾಲ್ಲೂಕಿನ ಮೂಗನಹುಂಡಿ ಕಮರಹಳ್ಳಿ, ಅನಗಳ್ಳಿ, ದೊಡ್ಡಮಾರಗೌಡನಹಳ್ಳಿ, ಮಾದಳ್ಳಿ,ನುಗ್ಗಳ್ಳಿ,ಶೆಟ್ಟಿನಾಯಕನಹಳ್ಳಿ, ಮೈದನಹಳ್ಳಿ, ಕೆ.ಜಿ.ಮೆಲ್ಲಹಳ್ಳಿ, ಕುಮಾರಬೀಡು ಹಳ್ಳಿಗಳ 13 ಕೆರೆ ಹಾಗೂ ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿಯ ಮನುಗನಹಳ್ಳಿ, ಮೂಗನಹಳ್ಳಿ ಕಟ್ಟೆ, ಅಂಕನಹಳ್ಳಿ, ಹಂದನಹಳ್ಳಿ, ದೊಡ್ಡ ಬೀಚನಹಳ್ಳಿ, ದಲ್ಲಾಳ್ ಕೊಪ್ಪಲು ಗ್ರಾಮಗಳ 7 ಕೆರೆ ಸೇರಿ ಒಟ್ಟು 20 ಕೆರೆಗಳಿಗೆ ಕೆಆರ್ ಎಸ್ ನಿಂದ ನೀರು ತುಂಬಿಸಲು, 75 ಕೋಟಿ ರೂ. ಮೊತ್ತದ ಪಟ್ಟಿಯನ್ನು ತಯಾರಿಸಿ, ಸರ್ಕಾರಕ್ಕೆ ಕಳುಹಿಸಿದ್ದರು. ಮುಖ್ಯಮಂತ್ರಿಗಳಿಗೆ ಈ ಗ್ರಾಮಗಳ ಬಗ್ಗೆ ಸಂಪೂರ್ಣ ಮಾಹಿತಿ ಗೊತ್ತಿದೆ. ನಾನು ಎರಡು ಬಾರಿ ಮುಖ್ಯಮಂತ್ರಿಗಳನ್ನು ಖುದ್ದಾಗಿ ಭೇಟಿ ಮಾಡಿ ಮನವಿ ಮಾಡಿರುತ್ತೇನೆಂದರು. ಸಚಿವರು ಉತ್ತರಿಸಿ ಈ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಿ, ಆದಷ್ಟು ಬೇಗ ಏತ ನೀರಾವರಿ ಯೋಜನೆ ಅನುಷ್ಠಾನ ಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

## ಯುವಪೀಳಿಗೆಯೇ ದೇಶದ ಸಂಪತ್ತು: ಶಾಸಕ ಜಿಟಿಡಿ

**ಮೈಸೂರು:** ಇಂದಿನ ಯುವಪೀಳಿಗೆ ದೇಶದ ಸಂಪತ್ತು. ಮುಂದಿನ ದಿನಗಳಲ್ಲಿ ನಾಯಕತ್ವ ಕೊಡುವವರಾಗಿದ್ದಾರೆ. ಬುದ್ಧ,ಬಸವ,ಡಾ.ಬಿ.ಆರ್.ಅಂಬೇಡ್ಕರ್, ಮಹಾತ್ಮ ಗಾಂಧೀಜಿ ಆದರ್ಶವನ್ನು ನಾವು ಪಾಲಿಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಸಲಹೆ ನೀಡಿದರು.

ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಗೆ ಬರುವ ಐಶ್ವರ್ಯ ರಾಯಲ್ ಬಡಾವಣೆಯಲ್ಲಿ ಆಯೋಜಿಸಿದ್ದ 77ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಬಡಾವಣೆಯ ಎಲ್ಲರೂ ಒಟ್ಟಾಗಿ ಸೇರಿ ಗಣರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿರುವುದು ಸಂತಸದ ವಿಚಾರ. ಸ್ಥಳೀಯವಾಗಿ ಒಟ್ಟಾಗಿ ರಾಷ್ಟ್ರೀಯ ಹಬ್ಬಗಳನ್ನು ಆಚರಣೆ ಮಾಡುವುದರಿಂದ ಒಂದಾಗಬಹುದಾಗಿದೆ. ದೇಶದ ಏಕತೆ,ಅಖಂಡತೆ,ಸಮಗ್ರತೆ ಐಕ್ಯತೆ,ಬದ್ಧತೆ,ಆರ್ಥಿಕತೆ ಎಲ್ಲಾ ದೃಷ್ಟಿಯಿಂದಲೂ ಒಟ್ಟಾಗಿ ಸೇರಿಸಿ ಭಾರತ ಒಂದೇ ಎನ್ನುವ ಸಂದೇಶ ನೀಡಿದ್ದಾರೆ. ತ್ಯಾಗ,ಬಲಿದಾನಗಳಿಂದ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ. ಅಂತಹ ಹೋರಾಟ ಮಾಡಿದ ಮಹನೀಯರನ್ನು ಸ್ಮರಿಸಿಕೊಳ್ಳಬೇಕು. ಅವರು ಹಾಕಿಕೊಟ್ಟ ಹಾದಿಯಲ್ಲಿ ಸಾಗಬೇಕು ಎಂದು ಸಲಹೆ ನೀಡಿದರು.

ಐಶ್ವರ್ಯ ರಾಯಲ್ ಬಡಾವಣೆ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಗಳಿಗೆ ಶೀಘ್ರದಲ್ಲಿ ಕುಡಿಯುವ ನೀರನ್ನು ಒದಗಿಸಲಾಗುವುದು ಪೈಪ್ ಲೈನ್ ಕಾಮಗಾರಿಗೆ ಟೆಂಡರ್ ಆಗಿದ್ದು ಫೆಬ್ರವರಿ ಮಾಹೆಯಲ್ಲಿ ಎಲ್ಲರಿಗು ಕಬಿನಿ ನೀರನ್ನು ಒದಗಿಸಲಾಗುವುದು. ಸಮಾರಂಭದಲ್ಲಿ ಮುಖಂಡರಾದ, ಜಯಕುಮಾರ್, ಕೆ.ಚಂದ್ರಶೇಖರ್, ಆನಂದ್, ಮುಖ್ಯಾಧಿಕಾರಿಗಳಾದ ಸುಜಯ್,



ಎಂ.ಎಂ.ಗ್ರೀನ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಮೋಹನ್‌ಕುಮಾರ್ ಮಾತನಾಡಿದರು. ಅನೇಕರು ಉಪಸ್ಥಿತರಿದ್ದರು.

## ಅಕ್ರಮ ಗಣಿಗಾರಿಕೆ ವಿರುದ್ದ ಕಾನೂನು ಕ್ರಮಕ್ಕೆ ಆಗ್ರಹ

**ಮಂಡ್ಯ:** ನಾಗಮಂಗಲ ತಾಲೂಕಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಅರಣ್ಯ ಪ್ರದೇಶದ ಭೂಮಿಯನ್ನು ಅನ್ಯರಿಗೆ ಅಕ್ರಮವಾಗಿ ಕಲ್ಲುಗಣಿಗಾರಿಕೆಗೆ ಅನುಮತಿ ನೀಡಿದ ಅಧಿಕಾರಿಗಳ ವಿರುದ್ದ ಕಾನೂನು ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಕಾರ್ಯಕರ್ತರು ಕೆ.ಆರ್.ರವೀಂದ್ರ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಗಮಂಗಲ ತಾಲೂಕಿನಲ್ಲಿ 80 ಸಾವಿರ ಎಕರೆಗೂ ಹೆಚ್ಚು ಅಕ್ರಮ ಖಾತೆ ಮಾಡಿ ಭೂ ಕಬಳಿಕೆ ನಡೆದಿದೆ. ಈ ಸಂಬಂಧ 8 ಅಧಿಕಾರಿಗಳ ವಿರುದ್ದ ಭ್ರಷ್ಟಾಚಾರ ನಿಗ್ರಹದಳಕ್ಕೆ 2019ರಲ್ಲಿ ದೂರು ಸಲ್ಲಿಸಲಾಗಿದೆ ಎಂದರು.

ಪ್ರಕರಣದ ತನಿಖೆ ನಡೆಸಲು ಜಿಲ್ಲಾಧಿಕಾರಿಗಳು ಅಪರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು. ತಂಡವು ಭ್ರಷ್ಟಾಚಾರ ನಿಗ್ರಹ ದಳಕ್ಕೆ ಸುಳ್ಳು ವರದಿ ನೀಡಿ. ಪ್ರಕರಣವನ್ನು ದಿಕ್ಕುತಪ್ಪಿಸುವ ಹುನ್ನಾರ ನಡೆಯುತ್ತಿದ್ದು, ಪ್ರಕರಣವನ್ನು ಲೋಕಾಯುಕ್ತ ಪೊಲೀಸರಿಗೆ ಅಥವಾ ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದರು.

ಸಿಬಿಐಗೆ ಹೆಚ್ಚು ಪ್ರಕರಣಗಳ ಒತ್ತಡವಿದೆ, ಸಿಬ್ಬಂದಿಯ ಲಭ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹೇಳಿಕೆ ನೀಡಿದ್ದಾರೆ. ಸಿಬಿಐಗೆ ತನಿಖೆ ಮಾಡಲು ಪ್ರಕರಣಗಳ ಇಲ್ಲವಾಗಿದ್ದು, ಅವರ ಹೇಳಿಕೆ ಸುಳ್ಳಾಗಿದೆ ಎಂದು ಆರೋಪಿಸಿದರು.

ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿಗಳು ತಹಸೀಲ್ದಾರ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸಿಬ್ಬಂದಿ ರಕ್ಷಣೆಗೆ ಸುಳ್ಳು ವರದಿ ನೀಡಿದ್ದಾರೆ. ಈ ಸಂಬಂಧ ತನಿಖಾ ತಂಡ, ಉಪವಿಭಾಗಾಧಿಕಾರಿ ನಂದೀಶ್ ಅವರ ಸುಳ್ಳುವರದಿಯ ವಿರುದ್ಧ ಲೋಕಾಯುಕ್ತ ಎಡಿಜಿಪಿ, ಮಂಡ್ಯ ಲೋಕಾಯುಕ್ತ ಎಸ್ಪಿ ಅವರಿಗೆ ದೂರು ಸಲ್ಲಿಸುತ್ತಿದ್ದೇನೆ ಎಂದು ಹೇಳಿದರು.

ನಾಗಮಂಗಲದಿಂದ ಕೇರಳ, ಮೈಸೂರು ಮತ್ತು ಬೆಂಗಳೂರಿಗೆ ದನ, ಎಮ್ಮೆ ಮಾಂಸ ಸಾಗಾಣೆ ಮಾಡಲಾಗುತ್ತಿದೆ. ದಿನನಿತ್ಯ, ಸ್ಟೀಲ್ ಬಾಕ್ಸ್, ದೊಡ್ಡ ಪ್ಲಾಸ್ಟಿಕ್ ಡಬ್ಬಿಯಲ್ಲಿ ತುಂಬಿಕೊಂಡು ಸಾಗಾಣೆ ಮಾಡಲಾಗುತ್ತಿದೆ. ಅಲ್ಲಿನ ಸ್ಥಳೀಯರು ಪೊಲೀಸರಿಗೆ ದೂರಲು ತೆರಳಿದಾಗ ಪೊಲೀಸರಿಂದ ಧಮ್ಕಿ, ಬೆದರಿಕೆ ಹಾಕಿದ ಘಟನೆ ನಡೆದಿದೆ. ಈ ಸಂಬಂಧ ಜಿಲ್ಲಾ ಪೊಲೀಸ್ ಎಸ್ಪಿ ಕ್ರಮ ವಹಿಸುವಂತೆ ಮನವಿ ಮಾಡಿದರು.

ನಾಗಮಂಗಲದಲ್ಲಿ ಭೂ ಕಬಳಿಕೆ ಸಂಬಂಧ ಇಲ್ಲಿಯವರೆಗೆ ನಡೆದ ತನಿಖೆ ಸಂಬಂಧ ಎಸ್ಪಿ ಅವರು ಪತ್ರಿಕಾಗೋಷ್ಠಿ ಕರೆದು ಮಾಹಿತಿ ನೀಡುವಂತೆ ಮನವಿ ಮಾಡಿದರು.




## ಭಾರತ ಸಂವಿಧಾನ ತಾಯಿ ಇದಂತೆ: ಶಾಸಕ ಟಿ.ಎಸ್. ಶ್ರೀವತ್ಸ

ಮೈಸೂರು: ಭಾರತ ಸಂವಿಧಾನ ತಾಯಿ ಇದ್ದಂತೆ, ಪ್ರತಿಯೊಬ್ಬ ಭಾರತೀಯನಿಗೂ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ,ಆರ್ಥಿಕ ಹಾಗೂ ಶೈಕ್ಷಣಿಕ ಅವಕಾಶಗಳನ್ನು ಕಲ್ಪಿಸಿ, ಸಮಾಜದಲ್ಲಿ ಹೇಗೆ ಬದುಕಬೇಕೆಂಬುದನ್ನು ಅದು ಕಲಿಸಿಕೊಡುತ್ತದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ನಗರದ ಕುವೆಂಪುನಗರದ ತಪೋನಂದನ ಉದ್ಯಾನವನ ಬಳಗದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಗಣರಾಜ್ಯೋತ್ಸವ ಜಾತಿ,ಮತ,ಧರ್ಮ ಎಲ್ಲವನ್ನೂ ಬದಿಗಿಟ್ಟು ದೇಶದ ಸರ್ವರೂ ಆಚರಿಸಿ, ಸಂಭ್ರಮಿಸುವ ಹಬ್ಬವಾಗಿದೆ. ಸರ್ವ ಶ್ರೇಷ್ಠ ಭಾರತ ಸಂವಿಧಾನದಿಂದಾಗಿ ಇಂದು ಇಡೀ ವಿಶ್ವವೇ ಭಾರತದತ್ತ ತಿರುಗಿನೋಡುವಂತಾಗಿದೆ. ಮತ್ತು ಇಡೀ ವಿಶ್ವಕ್ಕೆ ಭಾರತ ಸಂವಿಧಾನ ಮಾದರಿಯಾಗಿದೆ ಎಂದರು.



ಪತ್ರಕರ್ತರಾದ ರಶ್ಮಿಕೋಟಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ತಪೋವ ನಂದನ ಉದ್ಯಾನವನದ ಸಿಬ್ಬಂದಿಗಳಾದ ಮಹದೇವಮ್ಮ, ಗೀತಮ್ಮ, ಭದ್ರತಾ ಸಿಬ್ಬಂದಿ ಕಾಂತಮ್ಮ, ಬಿಎಸ್‌ಎಫ್ ನಿವೃತ್ತ ಯೋಧ ಗುರುಮೂರ್ತಿರನ್ನು ಇದೇ ವೇಳೆ ಗೌರವಿಸಲಾಯಿತು. ಬಳಗದ ಪುರುಷೋತ್ತಮ್, ದರ್ಶನ್, ಅತಿಥಿ ಉಪನ್ಯಾಸಕ ಡಾ.ದೇವರಾಜು, ಚಾರ್ಟರ್ಡ್ ಅಕೌಂಟೆಂಟ್ ಡಾ.ಅಶೋಕ್ ಕುಮಾರ್,ಉದ್ಯಮಿ ಪ್ರಕಾಶ್, ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ನರಸಿಂಹಮೂರ್ತಿ, ನಿವೃತ್ತ ಇಂಜಿನಿಯರ್ ರಾಮಕೃಷ್ಣೇಗೌಡ, ಸಾರಿಗೆ ಇಲಾಖೆ ನಿವೃತ್ತ ಜಂಟಿ ಆಯುಕ್ತರಾದ ತಿಮ್ಮಯ್ಯ, ಶಿಕ್ಷಣ ಇಲಾಖೆ ನಿವೃತ್ತ ಅಧಿಕಾರಿ ಸಿ.ರಾಮಣ್ಣ ಕದಲೂರು, ಬಿಎಸ್‌ಎನ್‌ಎಲ್ ನಿವೃತ್ತ ಅಧಿಕಾರಿ ಬಸವರಾಜು ಸೇರಿ ಇತರರು ಭಾಗವಹಿಸಿದ್ದರು.

# ಮನೆ ಮನೆಗಳ ಹಣತೆ ಡಾ.ಬಿ. ಆರ್.ಅಂಬೇಡ್ಕರ್ "ಮಾನವತೆಯ ಮಂತ್ರ "ಕೃತಿ ಬಿಡುಗಡೆ



**ಮೈಸೂರು:** ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಕುವೆಂಪು ಅವರು ಹೊಸ ಕಾಲಕ್ಕೆ ತಕ್ಕಂತೆ ಪರಿವರ್ತಿಸಿದ್ದಲ್ಲದೆ, ಅದಕ್ಕೆ ಹೊಸ ಪರಿಭಾಷೆಯನ್ನು ಬರೆದರು ಎಂದು ಹಿರಿಯ ಜಾನಪದ ವಿದ್ವಾಂಸ ಡಾ.ರಾಗೌ ಅಭಿಪ್ರಾಯಪಟ್ಟರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾಂಗಣದಲ್ಲಿ ನೆರಳು ಚಾರಿಟಬಲ್ ಟ್ರಸ್ಟ್‌ನ ವಾರ್ಷಿಕೋತ್ಸವದ ಪ್ರಯುಕ್ತ ಏರ್ಪಡಿಸಲಾಗಿದ್ದ ಕುವೆಂಪು ನೆನಪು ಕಾರ್ಯಕ್ರಮದಲ್ಲಿ ಡಾ. ಅಮ್ಮಸಂದ್ರ ಸುರೇಶ್ ಅವರ ?ಮನೆ ಮನೆಗಳ ಹಣತೆ ಡಾ.ಬಿ. ಆರ್.ಅಂಬೇಡ್ಕರ್? ಮತ್ತು ?ಮಾನವತೆಯ ಮಂತ್ರ? ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

20ನೇ ಶತಮಾನವನ್ನು ಕುವೆಂಪು ಅವರು ಇಲ್ಲದೆ ನೆನಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಅವರು ಶತಮಾನದ ಕವಿಯಾಗಿದ್ದಾರೆ. ಬಸವಣ್ಣನವರ ನಂತರ ಬಂದ ಮಹಾನ್ ದಾರ್ಶನಿಕರಾದ ಕುವೆಂಪು ಹೇಗೆ ಬದುಕಿದರೋ ಹಾಗೆಯೇ ಬರೆದರು. ಸ್ವಾಭಿಮಾನಿ ಸಂಸ್ಕೃತಿಯ ಪ್ರತೀಕವಾಗಿದ್ದ ಅವರು ಕನ್ನಡಕ್ಕೆ ದೊರೆತದ್ದು ಭುವನದ ಭಾಗ್ಯ ಎಂದು ಅವರು, ಕುವೆಂಪು ಅವರ ಜಯಂತಿಯನ್ನು ಆಚರಿಸುತ್ತಿರುವವರೆಲ್ಲರಿಗೂ ಕುವೆಂಪು ಅವರ ಸಾಹಿತ್ಯ ಜಾಗೃತಿಯನ್ನು ಉಂಟು ಮಾಡಿದೆ ಎಂದು ನನಗೆ ಅನಿಸುವುದಿಲ್ಲ ಎಂದು ಹೇಳಿದರು.

ನೆರಳು ಇ–ನಿಯತಕಾಲಿಕೆಯನ್ನು ಬಿಡುಗಡೆ ಮಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಇತ್ತೀಚೆಗೆ ಇ–ನಿಯತಕಾಲಿಕೆಗಳು ಪ್ರಬುದ್ಧಮಾನಕ್ಕೆ ಬರುತ್ತಿದ್ದು ಹೆಚ್ಚು ಜನರನ್ನು ಸುಲಭವಾಗಿ ತಲುಪುತ್ತಿವೆ. ಈ ನಿಟ್ಟಿನಲ್ಲಿ ನೆರಳು ಇ–ನಿಯತಕಾಲಿಕೆಗೆ ಯಶಸ್ಸು ಸಿಗಲಿ ಎಂದು ಹಾರೈಸಿ, ಹೆಚ್.ಡಿ.ಕೋಟೆ ತಾಲೂಕಿನ ನಾಗರಹೊಳೆ ಅಭಯಾರಣ್ಯದಲ್ಲಿ ವಾಸಿಸುತ್ತಿರುವ ಆದಿವಾಸಿಗಳು ಮತ್ತು ಅವರ ಮಕ್ಕಳ ಶಿಕ್ಷಣದ ಅಭಿವೃದ್ಧಿಗಾಗಿ ನೆರಳು ಚಾರಿಟಬಲ್ ಟ್ರಸ್ಟ್ ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ ಎಂದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಪ್ರೊ. ಚಿನ್ನಸ್ವಾಮಿ ಸೋಸಲೆ ಕೃತಿಗಳ ಕುರಿತು ಮಾತನಾಡಿ, 80 ವರ್ಷದ ಪ್ರಜಾಪ್ರಭುತ್ವ ಭಾರತದಲ್ಲಿ ವೇದಗಳನ್ನು ಕೇಳಿ ಆಚರಿಸಿದಷ್ಟು ಜನರು ವೇದನೆಗಳನ್ನು ನಿರ್ಮೂಲನೆ ಮಾಡುವುದಕ್ಕೋಸ್ಕರವೇ ಜಾರಿಗೆ ಬಂದಿರುವ ಸಂವಿಧಾನವನ್ನು ಓದಿ ಅರ್ಥೈಸಿಕೊಂಡಿಲ್ಲ. ಪುರಾಣದ ಚರಿತ್ರೆಗೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ವಾಸ್ತವದ ಚರಿತ್ರೆಗೆ ಕೊಡಲೇ ಇಲ್ಲ. ವಾಸ್ತವದ ದಾಖಲೆಗಳ ಮೂಲಕ ಭಾರತದ ಚರಿತ್ರೆಯನ್ನು ಅನಾವರಣಗೊಳಿಸಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಆಯುರ್ವೇದ ವೈದ್ಯ ಡಾ.ಎ ಎಸ್ ಚಂದ್ರಶೇಖರ್, ನೆರಳು ಚಾರಿಟಬಲ್ ಟ್ರಸ್ಟ್ ಗೌರವಾಧ್ಯಕ್ಷ ಎನ್.ಗಂಗಾಧರಪ್ಪ, ಕೃತಿಗಳ ಲೇಖಕರಾದ ಡಾ.ಅಮ್ಮಸಂದ್ರ ಸುರೇಶ್, ಟ್ರಸ್ಟಿನ ಉಪಾಧ್ಯಕ್ಷ ಮಹಿಮಾ ಶ್ರೀನಿವಾಸ್, ಟ್ರಸ್ಟ್ ನ ಗೌರವ ಅಧ್ಯಕ್ಷ ಮೋಹನ್, ಕಾರ್ಯದರ್ಶಿ ಪುರುಷೋತ್ತಮ, ಖಜಾಂಚಿ ಕುಮಾರ್ ಉಪಸ್ಥಿತರಿದ್ದರು.

# ಡಿಜಿಟಲ್ ಲೈಫ್



| ಪುಷ್ಪ ಪ್ರಸಾದ್



ಬದುಕಿನಲ್ಲಿ ಯಾವುದೂ ಶಾಶ್ವತವಲ್ಲ. ಕಷ್ಟಗಳು ಕೂಡ ಅಷ್ಟೇ. ಇವತ್ತಿನ ಕಷ್ಟ ನಾಳೆ ಕೊನೆಯಾಗಲೇಬೇಕು. ಇದು ಜಗದ ನಿಯಮವೂ ಕೂಡ. ಸದಾ ಕಷ್ಟಗಳು ಎದುರಾದಾಗ ಈ ವಿಷಯ ನಮ್ಮ ಮನಸಿನಲ್ಲಿ ಇರಬೇಕು. ಬಂಡೆಯಂತೆ ಎದುರು ನಿಂತಿರುವ ಸಮಸ್ಯೆ, ನಾಳೆ ಗುಲಗಂಜಿಯಂತೆ ಕರಗಿ ಹೋಗುತ್ತದೆ ಎಂಬ ಆತ್ಮವಿಶ್ವಾಸ ಇರಬೇಕು. ಜೀವನ ಯಾವತ್ತೂ ಹೈವೇ ದಾರಿಯಲ್ಲ. ಅಲ್ಲಿ ತಿರುವು ಮುರುವು, ಏರಿಳಿತಗಳು ಸದಾ ಇದ್ದದ್ದೆ. ಬದುಕಿನ ದಾರಿಯ ಬಗ್ಗೆ ಅರಿವಿದ್ದರೆ, ಯಾವ ಕಷ್ಟಗಳು ಸವಾಲ್ ಅನ್ನಿಸುದಿಲ್ಲ. ಇಂದಿನ ಡಿಜಿಟಲ್ ಬದುಕು ಸಂಗಾತಿಯೊಂದಿಗೆ ಸದಾ ಕಾಲ ಸಂಪರ್ಕದಲ್ಲಿರುವಂತೆ ಮಾಡುತ್ತದೆ. ಆದರೆ ಅದರಲ್ಲಿ ಮುಖದ ಭಾವನೆಗಳು ಕಾಣಸಿಗುವುದಿಲ್ಲ. ಮುಖಾಮುಖಿ ಕುಳಿತು ಮಾತನಾಡಿದಷ್ಟು ಅನುಭೂತಿ ಸಿಗುವುದಿಲ್ಲ. ಹೀಗಾಗಿ ಆದಷ್ಟು ಎದುರಿಗೆ ಕುಳಿತು ಮಾತನಾಡುವುದು ಒಳಿತು. ಪ್ರತಿದಿನ ಎಷ್ಟೇ ಕೆಲಸದ ಒತ್ತಡವಿದ್ದರೂ ಒಂದಷ್ಟು ಸಮಯವಾದರೂ ಸಂಗಾತಿಯೊಂದಿಗೆ ಕಳೆಯಿರಿ. ಇಬ್ಬರಿಗೂ ಇಷ್ಟವಾಗುವ ಕೆಲಸಗಳನ್ನು ಮಾಡಿ. ಈ ವೇಳೆ ತಮಾಷೆ, ತರಲೆ, ನಗು ಎಲ್ಲವೂ ಕೂಡಿರಲಿ. ಆಕೆಯ/ ಅವನ ಸಣ್ಣ ವಿಚಾರವನ್ನೂ ಕೇಳಿಸಿಕೊಂಡು ಸ್ಪಂದಿಸಿ. ಇವೆಲ್ಲವೂ ಸಾಧ್ಯವಾಗುವುದು ಜತೆಯಾಗಿ ಕುಳಿತು ಮಾತನಾಡಿದಾಗ ಅಥವಾ ಒಟ್ಟಿಗೆ ಇರುವಾಗ ಮಾತ್ರ. ಸಂವಹನ ಪ್ರತೀ ಸಂಬಂಧದ ಉಸಿರು ಎಂದರೆ ತಪ್ಪಲ್ಲ. ನಮ್ಮ ಪ್ರತಿಯೊಂದು ಕೆಲಸದ ಬಗ್ಗೆಯೂ ಸಂಗಾತಿಗೆ ತಿಳಿಸಿದರೆ ಉತ್ತಮ. ಇದರಿಂದ ಅವರಿಗೂ ಒಂದು ಧೈರ್ಯವಿರುತ್ತದೆ. ಆಸೆಗಳ ಬಗ್ಗೆ ಓಪನ್ ಆಗಿ ಹೇಳಿಕೊಳ್ಳಬೇಕು, ವರ್ಬಲ್ ಕಮ್ಯುನಿಕೇಷನ್ಗಿಂತ ನಾನ್ ವರ್ಬಲ್ ಕಮ್ಯುನಿಕೇಷನ್ ಹೆಚ್ಚು ಹತ್ತಿರವಾಗಿಸುತ್ತದೆ. ಸಂಬಂಧ ಎಷ್ಟೇ ಗಟ್ಟಿಯಾಗಿದ್ದರೂ ದೈಹಿಕ ಆಕರ್ಷಣೆ ಎಲ್ಲರಲ್ಲೂ ಇರುತ್ತದೆ. ಅದು ಅಕ್ಕಪಕ್ಕ ಕುಳಿತುಕೊಳ್ಳುದಿರಬಹುದು, ಹೆಗಲ ಮೇಲೆ ಕೈ ಇಟ್ಟು ಮಾತನಾಡುವುದಿರಬಹುದು. ಅಪ್ಪುಗೆ ಇರಬಹುದು, ಇತರೆ ಯಾವುದಾದರೂ ಸಂಗಾತಿಗೆ ಯಾವುದು ಕಂಪರ್ಟ್ ಫೀಲ್ ಕೊಡುತ್ತದೆ ಎನ್ನುವುದನ್ನು ಅರ್ಥಮಾಡಿಕೊಂಡರೆ ಸಾಕು. ಇದು ಸಂಬಂಧವನ್ನು ಇನ್ನಷ್ಟು ಹತ್ತಿರವಾಗಿಸುತ್ತದೆ. ಕೆಲವು ವಿಚಾರಗಳನ್ನು ಮಾತನಾಡುವಾಗಲೂ ನೇರವಾಗಿ ಮಾತಿನಲ್ಲಿ ಹೇಳುವುದಕ್ಕಿಂತ ಕೈ ಹಿಡಿದುಕೊಂಡು ಅಥವಾ



ಪಕ್ಕದಲ್ಲಿ ಕುಳಿತು ಮಾತನಾಡುವುದರಿಂದ ಸಂಪೂರ್ಣ ಗಮನ ಮಾತಿನ ಮೇಲಿರುತ್ತದೆ. ಹೀಗಾಗಿ ದೈಹಿಕ ಅನ್ಯೋನ್ಯತೆ ಪ್ರತೀ ಸಂಬಂಧದಲ್ಲಿ ಮುಖ್ಯವಾಗಿರುತ್ತದೆ. ವಸ್ತು ಅಥವಾ ಸಮಯ ಇರಬಹುದು ಖುಷಿ ನೀಡುವ ಕೆಲಸಗಳನ್ನು ಅಭ್ಯಸಿಸಿಕೊಳ್ಳಬೇಕು. ಅದೇ ರೀತಿ ಇಬ್ಬರ ಭಾವನೆಗಳನ್ನು ಗೌರವಿಸಿ ಅದೇ ರೀತಿ ಸ್ವೀಕರಿಸಿಕೊಳ್ಳಬೇಕು.

ಇದರಿಂದ ಇಬ್ಬರ ನಡುವೆ ಜಗಳಗಳು ತಪ್ಪುವುದಲ್ಲದೆ ಯಾವುದು ಅಗತ್ಯ ಎನ್ನುವುದನ್ನು ತಿಳಿದುಕೊಳ್ಳಬಹುದು. ನಾನೇ ಗೆಲ್ಲಬೇಕು ಎನ್ನುವ ಹಠ ಇಬ್ಬರಲ್ಲೂ ಇರಬಾರದು, ಸಂಬಂಧದಲ್ಲಿ ಇಬ್ಬರ ಗೆಲುವನ್ನೂ ಆನಂದಿಸಿ ಸೋಲಿನಿಂದ ಎದ್ದು ಬರುವುದು ಹೇಗೆ ಎನ್ನುವುದನ್ನು ಚರ್ಚಿಸಬೇಕು.

ಜೀವನ ಎಂದ ಮೇಲೆ ಏಳು ಬೀಳು ಸಹಜ ಎಲ್ಲದಕ್ಕೂ ಸಿದ್ಧರಾಗಿರಬೇಕು. ಇದು ಇಬ್ಬರ ನಡುವಿನ ಅನ್ಯೋನ್ಯತೆಯನ್ನು ಹೆಚ್ಚಿಸುತ್ತದೆ. ಕಷ್ಟ ಅಥವಾ ಸಮಸ್ಯೆ ಯಾವ ರೀತಿ ಬರುತ್ತದೆ ಎಂದು ಊಹಿಸಲು ಅಸಾಧ್ಯ ಅಂತಹ ಸಂದರ್ಭಗಳಲ್ಲಿ ಮನಸ್ತಾಪ ಮಾಡಿಕೊಳ್ಳದೆ ಪಾಸಿಟಿವ್ ಆಗಿ ಯೋಚಿಸಬೇಕು. ಹೊರಗಿನವರ ಸಹಾಯ ಕೇಳುವ ಮೊದಲು ಇಬ್ಬರ ಯೋಚನೆಗಳನ್ನು ವಿನಿಮಯ ಮಾಡಿಕೊಂಡರೆ ಸಮಸ್ಯೆಗೆ ಪರಿಹಾರ ಖಂಡಿತಾ ಸಿಗುತ್ತದೆ.

# ಕರ್ತವ್ಯ ಪಥದಲ್ಲಿ ಕಿರಣ್ ಬೇಡಿ



| ವೀಣಾ ಹೇಮಂತ್‌ಗೌಡ ಪಾಟೀಲ್

ತನ್ನ 26ನೇ ವಯಸ್ಸಿನಲ್ಲಿ ಆಕೆಗೆ ಚಪ್ಪಾಳೆಯ ಘೋಷಣೆಯ ಅವಶ್ಯಕತೆ ಇರಲಿಲ್ಲ. ಆಕೆ ತನಗಾಗುತ್ತಿರುವ, ತನ್ನ ಸ್ತ್ರೀ ಸಮುದಾಯಕ್ಕೆ ಆಗುತ್ತಿರುವ ತಾರತಮ್ಯದ ವಿರುದ್ಧ ದನಿಯೆತ್ತಿದಳು.

ಅದು 1975ರ ಕಾಲ. ಐಪಿಎಸ್ ತರಬೇತಿಯನ್ನು ಪೂರೈಸಿ ದೇಶದ ಮೊಟ್ಟ ಮೊದಲ ಐ ಪಿ ಎಸ್ ಅಧಿಕಾರಿಯಾಗಿ ಕಿರಣ್ ಬೇಡಿ ದೆಹಲಿ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಗಣರಾಜ್ಯೋತ್ಸವ ಇನ್ನೇನು ಕೆಲ ದಿನಗಳಿವೆ ಎನ್ನುವಾಗ ಗಣರಾಜ್ಯೋತ್ಸವದ ಪೆರೇಡ್ ನ ಪೊಲೀಸ್ ವಿಭಾಗಕ್ಕೆ ಯಾರನ್ನು ನಾಯಕರನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು ಎಂಬ ಗೊಂದಲ ಇತ್ತು. ಬೇರೊಬ್ಬ ವ್ಯಕ್ತಿಯನ್ನು ಗಣರಾಜ್ಯೋತ್ಸವದ ಪೆರೇಡ್ ಗೆ ಆಯ್ಕೆ ಮಾಡಿಕೊಳ್ಳಲಾಯಿತು.

ಕಿರಣ್ ಬೇಡಿ ಎಲ್ಲ ರೀತಿಯಲ್ಲೂ ಈ ನಾಯಕತ್ವವನ್ನು ವಹಿಸಲು ಸಿದ್ಧರಾಗಿದ್ದರು ಕೂಡ, ಆಕೆಗೆ ಎಲ್ಲ ರೀತಿಯ ತರಬೇತಿ ಇದ್ದು ಆಕೆ ಸದಾ ಶಿಸ್ತು ಮತ್ತು ಕರ್ತವ್ಯ ಪ್ರಜ್ಞೆಯನ್ನು ಪರಿಪಾಲಿಸುತ್ತಿದ್ದು ಕೂಡ ಕೇವಲ ಹೆಣ್ಣು ಮಗಳು ಎಂಬ ಕಾರಣಕ್ಕೆ ಅವರಿಗೆ ಅವಕಾಶವನ್ನು ತಿರಸ್ಕರಿಸಲಾಯಿತು.

ಇದರಿಂದ ತುಸು ಬೇಸರಗೊಂಡ ಕಿರಣ್ ಬೇಡಿ ಅವರು ತನ್ನ ಮೇಲಧಿಕಾರಿ ಬಿ. ಆರ್. ರಾಜಗೋಪಾಲ್ ಅವರಿಗೆ . ಸರ್ ನನ್ನನ್ನು ಏಕೆ ಗಣರಾಜ್ಯೋತ್ಸವದ ಪೆರೇಡ್ಗೆ ಆಯ್ಕೆ ಮಾಡಿಕೊಳ್ಳುತ್ತಿಲ್ಲ? ಎಂದು ಕೇವಲ ಒಂದು ಸರಳ ಪ್ರಶ್ನೆಯನ್ನು ಕೇಳಿ ಅವರ ಯೋಚನೆಯ ದಿಕ್ಕನ್ನೇ ಬದಲಾಯಿಸಿದರು.

ಎಲ್ಲರಿಗೂ ಇದ್ದದ್ದು ಒಂದೇ ಅನುಮಾನ ಸುಮಾರು 14 ಕಿಲೋ ಮೀಟರ್ಗಳ ದೂರವನ್ನು ನಿರಂತರವಾಗಿ ಕೈಯಲ್ಲಿ ತೂಕದ ಖಡ್ಗವನ್ನು ಹಿಡಿದು ಆಕೆ ತನ್ನ ಪುರುಷ ಸಹೋದ್ಯೋಗಿಗಳ ತಂಡವನ್ನು ಮುನ್ನಡೆಸಲು ಹಾಗೂ ಯಾವುದೇ ತಡೆಯಿಲ್ಲದೆ ಸತತವಾಗಿ ನಡೆಯಲು ಸಾಧ್ಯವೇ? ಎಂಬುದು ಅವರ ಪ್ರಶ್ನೆಯಾಗಿತ್ತು.


ಮೇಲೆ ಹೇಳಿದ ಉತ್ತರವನ್ನು ತನ್ನ ಅಧಿಕಾರಿಗಳಿಂದ ನಿರೀಕ್ಷಿಸಿದ್ದ ಕಿರಣ್ ಬೇಡಿ ಅವರಿಗೆ ಅದೇ ಉತ್ತರ ದೊರೆತಾಗ ಆಕೆ ಅತ್ಯಂತ ಪ್ರಾಮಾಣಿಕವಾಗಿ ಉತ್ತರಿಸಿದ್ದು ಹೀಗೆ ಸುಮಾರು 70 ಜನ ಪುರುಷ ಸಹೋದ್ಯೋಗಿಗಳ ಜೊತೆಗೆ ನನಗೆ ತರಬೇತಿಯನ್ನು ನೀಡಲಾಗಿತ್ತು ಅವರು ಮಾಡಿದ ಎಲ್ಲಾ ಕವಾಯತುಗಳನ್ನು ನಾನು ತರಬೇತಿ ಅವಧಿಯಲ್ಲಿ ಮಾಡುತ್ತಿದ್ದೆ ಅವರಿಗೆ ನೀಡಿದ ಎಲ್ಲಾ ಕಠಿಣ ಸವಾಲುಗಳನ್ನು ನಾನು ಕೂಡ ಅವರೊಂದಿಗೆ ಸರಿಸಮನಾಗಿ ಪೂರೈಸಿದ್ದೇನೆ. ಪುರುಷರಿಗಿದ್ದ ದೈಹಿಕ ಸಾಮರ್ಥ್ಯದ ಪರೀಕ್ಷೆಗಳು ಕೂಡ ನನಗೆ ಇದ್ದು ಅವುಗಳನ್ನು ಕೂಡ ನಾನು ಸರಿಯಾಗಿ ನಿರ್ವಹಿಸಿದ್ದೇನೆ. ಈಗಾಗಲೇ ಹಲವಾರು ಬಾರಿ ನಾನು ಅವರ ಸರಿಸಮನಾಗಿ ಕಾರ್ಯನಿರ್ವಹಿಸಬಲ್ಲೆ



ಎಂದು ಸಾಬೀತುಪಡಿಸಿರುವುದನ್ನೇ ಮತ್ತೆ ಮತ್ತೆ ಎಷ್ಟು ಬಾರಿ, ಎಲ್ಲ ಪರೀಕ್ಷೆಗಳಲ್ಲಿ ನನ್ನನ್ನು ಎಷ್ಟು ಕಾಲದವರೆಗೆ ಹೀಗೆಯೇ ಸಾಬೀತುಪಡಿಸಿಕೊಳ್ಳಬೇಕು ಎಂಬ ಆಕೆಯ ಪ್ರಶ್ನೆ ಮೇಲಾಧಿಕಾರಿಗಳನ್ನು ಗಲಿಬಿಲಿಗೆ ತಳ್ಳಿತು.

ಆಕೆಯ ಪ್ರಶ್ನೆ ಅಧಿಕಾರಿಗಳಲ್ಲಿ ಸಮ್ಮತ ಭಾವವನ್ನು ಮೂಡಿಸಿ ಅಂತಿಮವಾಗಿ ಆಕೆಗೆ ಈ ಪೆರೇಡ್ ನ ನೇತೃತ್ವವನ್ನು ನೀಡಲಾಯಿತು. ಕಠಿಣ ತರಬೇತಿ ಮತ್ತೆ ಆರಂಭವಾಯಿತು.

ದೆಹಲಿಯ ಕಡುಚಳಿಯ ಆ ದಿನಗಳಲ್ಲಿ ಮುಂದಿನ ವಸ್ತುಗಳು ಕಣ್ಣಿಗೆ ಕಾಣಿಸದೆ ಇರುವಷ್ಟು ಮಂಜಿನ ಮುಸುಕನ್ನು ಹೊದ್ದ ಮುಂಜಾವುಗಳಲ್ಲಿ ಸಮವಸ್ತ್ರದ ಜೊತೆಗೆ ಯಮಭಾರದ ಬೂಟುಗಳನ್ನು ಧರಿಸಿ ಕೈಯಲ್ಲಿ ಖಡ್ಗವನ್ನು ಹಿಡಿದು ಕರ್ತವ್ಯಪಥದ ಅತಿ ದೊಡ್ಡ ದೂರವನ್ನು ನಡೆಯುವ ತರಬೇತಿಯನ್ನು ಆಕೆಗೆ ನೀಡಲಾಯಿತು.ಒಂದೊಂದು ಹೆಜ್ಜೆಯನ್ನು ಕಿತ್ತಿಡುವಲ್ಲಿಯೂ ದೇಹ ಪ್ರತಿಭಟನೆ ತೋರುತ್ತಿದ್ದರೂ ಪ್ರತಿಯೊಂದು ತಾಲೀಮು ಕೂಡ ಆಕೆಯಲ್ಲಿ ಅಗೋಚರ ಶಕ್ತಿಯನ್ನು ತುಂಬುತ್ತಿತ್ತು. ದಿನದಿಂದ ದಿನಕ್ಕೆ ಆಕೆಯ ಮನೋಬಲ ಮತ್ತು ಸ್ನಾಯುಬಲಗಳೆರಡೂ ಒಂದಕ್ಕೊಂದು ತಾಳೆ ಆಗುತ್ತಾ ಅಂತಿಮವಾಗಿ ಕರ್ತವ್ಯ ಪಥದಲ್ಲಿ ನಡೆಯುವ ದಿನದ ಹೊತ್ತಿಗೆ ಆಕೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಸಂಪೂರ್ಣ ತಯಾರಾದರು.



ಆ ವರ್ಷದ ಗಣರಾಜ್ಯೋತ್ಸವ ದಿನದಂದು ಆಕೆ ತನ್ನ ಎಲ್ಲಾ ಪುರುಷ ಸಹೋದ್ಯೋಗಿಗಳ ಜೊತೆಗೆ ಮುಂಚೂಣಿಯಲ್ಲಿ ನಿಂತು ಮುಂದೆ ಸಾಗಿದಾಗ ಭಾರತದ ಒಬ್ಬ ಯುವ ಸಾಧಕಿಯ ಶ್ರದ್ಧಾಪೂರ್ವರ ಹೆಜ್ಜೆಗಳು ಭಾರತ ದೇಶದ ಮಹಿಳಾ ನಾಯಕತ್ವಕ್ಕೆ ಹೊಸ ಮುನ್ನುಡಿಯನ್ನು ಬರೆಯುತ್ತಿತ್ತು. ಅದು ಕೇವಲ ಒಂದು ಪೆರೇಡ್ ಆಗಿರಲಿಲ್ಲ... ಅದು ತನ್ನವರಿಂದ ಹೆಣ್ಣು ಎಂಬ ಕಾರಣಕ್ಕೆ ನೋಯಿಸಲ್ಪಟ್ಟ, ಕೀಳಾಗಿ ಅಪಮಾನಿಸಲ್ಪಟ್ಟ, ಹಿಂದೆ ತಳ್ಳಲ್ಪಟ್ಟ ಪ್ರತಿಯೊಬ್ಬ ಮಹಿಳೆಗೂ ದೃಢ ವಿಶ್ವಾಸವನ್ನು ತುಂಬುವ ನಡಿಗೆಯಾಗಿತ್ತು.




ನೋಡಿದಿರಾ ಸ್ನೇಹಿತರೆ,

ನಮ್ಮ ಮಹಿಳೆಯರು ಹಿಂದಿನಿಂದಲೂ ಎಲ್ಲ ರೀತಿಯ ತಾರತಮ್ಯಗಳನ್ನು ಅನುಭವಿಸಿಯೂ ಕೂಡ ಇಂದು ವಿವಿಧ ಕಾರ್ಯ ಚಟುವಟಿಕೆಗಳಲ್ಲಿ, ರಂಗಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ತಾವು ಇಷ್ಟಪಟ್ಟು ಆರಿಸಿಕೊಂಡ ಉದ್ಯೋಗಗಳಲ್ಲಿ ಹೊಸ ಹೊಸ ಅವಕಾಶಗಳನ್ನು ಗಳಿಸಿಕೊಳ್ಳುತ್ತ ಮುಂದೆ ಸಾಗುತ್ತಿದ್ದಾರೆ.

ಹೆಣ್ಣುಮಕ್ಕಳು ತಮ್ಮ ವೈಯುಕ್ತಿಕ ಗೌರವ ಹಾಗೂ ಘನತೆಯನ್ನು ಎತ್ತಿ ಹಿಡಿಯುವುದರ ಜೊತೆ ಜೊತೆಗೆ ಕೌಟುಂಬಿಕ ನೆಮ್ಮದಿಯನ್ನು ಪ್ರೀತಿ ವಿಶ್ವಾಸವನ್ನು ಘನತೆ ಗೌರವಗಳನ್ನು ಕೂಡ ಎತ್ತಿ ಹಿಡಿದರೆ ಅತೀವ

ಆತ್ಮ ತೃಪ್ತಿ ಹಾಗೂ ಹೆಮ್ಮೆಯಿಂದ ಅವರ ಪಾಲಕರ ಎದೆಗಳು ಉಬ್ಬುತ್ತವೆ. ಅದೆಷ್ಟೇ ಕಠಿಣ ಸವಾಲುಗಳೇ ಬಂದರೂ ಕೂಡ ತಮ್ಮ ಮಕ್ಕಳ ಬೆಂಬಲಕ್ಕೆ ಆ ಪಾಲಕರು ನಿಲ್ಲುತ್ತಾರೆ. ಅಂತಹ ಧೀಶಕ್ತಿ ನಮ್ಮ ಎಲ್ಲಾ ಹೆಣ್ಣು ಮಕ್ಕಳಲ್ಲೂ ಬರಲಿ, ಅಂತಹ ನಾರಿಶಕ್ತಿಯ ಪುಣ್ಯ ಗರ್ಭದಲ್ಲಿ ಅತ್ಯುತ್ತಮ ಕುಡಿಗಳು ಭವ್ಯ ಭಾರತದ ಭವಿಷ್ಯವನ್ನು ಇನ್ನಷ್ಟು ಪ್ರಖರವಾಗಿ ಬರೆಯಲಿ ಎಂಬ ಆಶಯದೊಂದಿಗೆ



# ಎಷ್ಟು ಕಷ್ಟವೋ ಹೊಂದಿಕೆಯೆಂಬುದು ನಾಲ್ಕು ದಿನದ ಈ ಬದುಕಿನಲ್ಲಿ

ಎಷ್ಟು ಕಷ್ಟವೋ ಹೊಂದಿಕೆಯೆಂಬುದು ನಾಲ್ಕು ದಿನದ ಈ ಬದುಕಿನಲ್ಲಿ" ಎಂಬುದು ಪ್ರಸಿದ್ಧ ಕವಿ ಜಿ.ಎಸ್.ಶಿವರುದ್ರಪ್ಪನವರು ಬರೆದ, "ಎಲ್ಲೋ ಹುಡುಕಿದೆ ಇಲ್ಲದ ದೇವರ" ಭಾವಗೀತೆಯ ಸಾಲು. ಇದು ನನ್ನನ್ನು ಯಾವಾಗಲೂ ಕಾಡುವ ಸಾಲುಗಳು . ಈ ಅತ್ಯದ್ಭುತ ಎರಡು ಸಾಲುಗಳು ನಮ್ಮ ಬಾಳಿನ ಬಹು ದೊಡ್ಡ ಸವಾಲನ್ನು ಬಹಳ ಸರಳವಾಗಿ ತಿಳಿಸುತ್ತದೆ .

ನಮ್ಮ ಹಿರಿಯರು ಬದುಕನ್ನು 'ಮೂರು ದಿನದ ಬಾಳು' ಎಂದು ಕರೆದಾಗ, ಅದರಲ್ಲಿ ಹತಾಶೆಗಿಂತ ಹೆಚ್ಚಾಗಿ 'ಸಮಯದ ಮೌಲ್ಯ' ಅಡಗಿದೆ. ಹುಟ್ಟು ಮತ್ತು ಸಾವಿನ ನಡುವಿನ ಈ ಅಲ್ಪಾವಧಿಯನ್ನು ಅರ್ಥಪೂರ್ಣವಾಗಿಸುವುದು ನಾವು ಇತರರೊಂದಿಗೆ ಮತ್ತು ಈ ಜಗತ್ತಿನೊಂದಿಗೆ ಹೇಗೆ 'ಹೊಂದಿಕೊಳ್ಳುತ್ತೇವೆ' ಎಂಬ ಸಂಕೀರ್ಣ ಪ್ರಕ್ರಿಯೆಯ ಮೇಲೆ ನಿಂತಿದೆ. ಅಲ್ಪಕಾಲದ ಈ ಪಯಣದಲ್ಲಿ ನಾವು ಎದುರಿಸುವ ಅತಿದೊಡ್ಡ ಸವಾಲೆಂದರೆ ಅದು ಹೊಂದಾಣಿಕೆ. ಇದು ಕೇವಲ ಲೌಕಿಕ ಕೌಶಲವಲ್ಲ; ಅದೊಂದು ಆಧ್ಯಾತ್ಮಿಕ ಸಾಧನೆ.

ಹೊಂದಾಣಿಕೆ ಎಂದರೆ ಅನೇಕರು ಅದನ್ನು ಸೋಲು ಅಥವಾ ಶರಣಾಗತಿ ಎಂದು ಭಾವಿಸುತ್ತಾರೆ. "ನಾನೇಕೆ ಮೊದಲು ಮಾತಾಡಬೇಕು?", "ನನ್ನ ತಪ್ಪು ಇಲ್ಲದಿದ್ದರೂ ನಾನು ಯಾಕೆ ಬಗ್ಗಬೇಕು?" ಎಂಬ ಪ್ರಶ್ನೆಗಳು ನಮ್ಮ ಸಂಬಂಧಗಳ ನಡುವೆ ಗೋಡೆಯಾಗಿ ನಿಲ್ಲುತ್ತವೆ. ಆದರೆ ವಾಸ್ತವದಲ್ಲಿ, ಹೊಂದಾಣಿಕೆ ಎನ್ನುವುದು ವ್ಯಕ್ತಿತ್ವದ ದೌರ್ಬಲ್ಯವಲ್ಲ; ಬದಲಾಗಿ ಅದು ಆಂತರಿಕ ಶಕ್ತಿಯ ಸಂಕೇತ.

ನಮ್ಮ ಮತ್ತು ಇತರರ ನಡುವೆ ಹೊಂದಾಣಿಕೆ ಸಾಧ್ಯವಾಗದಿರಲು ಮುಖ್ಯ ಕಾರಣ ನಮ್ಮ 'ಅಹಂಕಾರ'. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳುತ್ತಾನೆ: "**ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ ।**"

ಅಹಂಕಾರ, ಬಲ, ಗರ್ವ, ಕಾಮ ಮತ್ತು ಕ್ರೋಧಗಳನ್ನು ಆಶ್ರಯಿಸಿದವರು ನನ್ನನ್ನು ಮತ್ತು ಇತರರನ್ನು ದ್ವೇಷಿಸುತ್ತಾರೆ.)ಟ

ಹೊಂದಾಣಿಕೆ ಎಂದರೆ ಶರಣಾಗತಿಯಲ್ಲ, ಅದು ನಮ್ಮೊಳಗಿನ 'ನಾನು' ಎಂಬ ಅಹಂಭಾವವನ್ನು ಕರಗಿಸುವುದು. ನದಿಯೊಂದು ಸಮುದ್ರವನ್ನು ಸೇರುವಾಗ ತನ್ನ ಹೆಸರನ್ನು ಹೇಗೆ ಬಿಟ್ಟುಕೊಡುತ್ತದೋ, ಹಾಗೆಯೇ ನಾವು ಸಂಬಂಧದ ಹಿತದೃಷ್ಟಿಯಿಂದ ಸಣ್ಣಪುಟ್ಟ ಹಠಗಳನ್ನು ಬಿಟ್ಟುಕೊಟ್ಟಾಗ ಅಲ್ಲಿ ಶಾಂತಿ ನೆಲೆಸುತ್ತದೆ.

ಗಿಡವೊಂದು ಗಾಳಿಗೆ ಬಗ್ಗುವುದು ಅದು ದುರ್ಬಲವೆಂದಲ್ಲ, ಅದು ಬದುಕಲು ಇಚ್ಛಿಸುತ್ತದೆ ಎಂದರ್ಥ. ಮನುಷ್ಯನೂ ಅಷ್ಟೇ, ಸಂಬಂಧಗಳನ್ನು ಉಳಿಸಿಕೊಳ್ಳುವ ಹಂಬಲವಿದ್ದಾಗ ಮಾತ್ರ ಅಲ್ಲಿ ಪ್ರಬುದ್ಧತೆ ಕಾಣಲು ಸಾಧ್ಯ.

ಯಾವಾಗ ನಾವು ಇತರರನ್ನು ನಮ್ಮದೇ ಪ್ರತಿಬಿಂಬ ಎಂದು ನೋಡುತ್ತೇವೆಯೋ, ಆಗ ಅವರ ದೋಷಗಳೊಂದಿಗೆ ಹೊಂದಿಕೊಳ್ಳುವುದು ಸುಲಭವಾಗುತ್ತದೆ. ನಮ್ಮ ಕೈಯ ಬೆರಳೊಂದು ಅಕಸ್ಮಾತ್ ಕಣ್ಣಿಗೆ ಚುಚ್ಚಿದರೆ ನಾವು ಕೈಯನ್ನು ದಂಡಿಸುವುದಿಲ್ಲ, ಬದಲಾಗಿ ನೋವನ್ನು ಸಹಿಸಿಕೊಳ್ಳುತ್ತೇವೆ. ಸಂಬಂಧಗಳಲ್ಲಿಯೂ ಇದೇ ರೀತಿಯ 'ಆತ್ಮೀಯತೆ' ಮತ್ತು 'ಕ್ಷಮಾ ಗುಣ' ಇರಬೇಕು.

ಹೊಂದಾಣಿಕೆ ಎನ್ನುವುದು ಕೇವಲ ಪುಸ್ತಕದ ಸಿದ್ಧಾಂತವಲ್ಲ, ಅದು ದೈನಂದಿನ ಆಚರಣೆ. ಇದನ್ನು ಕೆಲವು ಸರಳ ಉದಾಹರಣೆಗಳ ಮೂಲಕ ನೋಡಬಹುದು:

**ಸಂಗೀತದ ವೀಣೆ:** ವೀಣೆಯ ತಂತಿಗಳನ್ನು ಅತಿಯಾಗಿ ಬಿಗಿದರೆ ಅವು ತುಂಡಾಗುತ್ತವೆ, ಅತಿಯಾಗಿ ಸಡಿಲ ಬಿಟ್ಟರೆ ನಾದ ಬರುವುದಿಲ್ಲ. ಬದುಕಿನ ಹೊಂದಾಣಿಕೆಯೂ ಅಷ್ಟೇ; ಅತಿಯಾದ ಹಠವೂ ಸಲ್ಲದು, ಅತಿಯಾದ ಉದಾಸೀನವೂ ಸಲ್ಲದು. ಆಗಲೇ ಜೀವನದ ಸಂಗೀತ ಮಧುರ.

**ರಸ್ತೆಯ ಸಂಚಾರ:** ನಾವು ರಸ್ತೆಯಲ್ಲಿ ಹೋಗುವಾಗ ನಮಗೆ ಬೇಕಾದ ಹಾಗೆಯೇ ಗಾಡಿ ಚಲಾಯಿಸಲು ಸಾಧ್ಯವಿಲ್ಲ. ಎದುರಿನಿಂದ ಬರುವವರಿಗೆ ದಾರಿ ಬಿಟ್ಟುಕೊಡುವುದು ಸೋಲಲ್ಲ, ಅದು ಎಲ್ಲರೂ ಸುರಕ್ಷಿತವಾಗಿ ಗುರಿ ತಲುಪುವ ಜಾಣತನ. ನಾವು ಯಂತ್ರಗಳನ್ನು ನಮಗೆ ಬೇಕಾದಂತೆ ಹೊಂದಿಸಿಕೊಳ್ಳಬಲ್ಲೆವು, ಆದರೆ ಮನುಷ್ಯರನ್ನು ಹಾಗೆ ಮಾಡಲಾಗದು. ಅಲ್ಲಿ ಪ್ರೀತಿ ಮತ್ತು ತಾಳ್ಮೆಯಷ್ಟೇ ಕೆಲಸ ಮಾಡುವುದು.

ಬದಲಾವಣೆ ನಮ್ಮಿಂದಲೇ ಆರಂಭವಾಗಲಿ

ಜೀವನವು ನಾವು ಅಂದುಕೊಂಡಂತೆ ಸರಳವಾಗಿರುವುದಿಲ್ಲ. ಇಲ್ಲಿ ಸಂದರ್ಭಗಳು ಬದಲಾಗುತ್ತವೆ, ಮನುಷ್ಯರು ಬದಲಾಗುತ್ತಾರೆ. ಈ ಬದಲಾವಣೆಗೆ ನಾವು ಎಷ್ಟು ಬೇಗ ತೆರೆದುಕೊಳ್ಳುತ್ತೇವೆ ಎಂಬುದು ಮುಖ್ಯ.

* **ತಾಳ್ಮೆ:** ತಕ್ಷಣದ ಪ್ರತಿಕ್ರಿಯೆಗಿಂತ ಮೌನ ಮತ್ತು ತಾಳ್ಮೆ ಅನೇಕ ಬಿಕ್ಕಟ್ಟುಗಳನ್ನು ತಡೆಯಬಲ್ಲವು.
* **ಸ್ಥಿತಪ್ರಜ್ಞತೆ:** ಪ್ರತಿಯೊಬ್ಬರಿಗೂ ಅವರದೇ ಆದ ಹಿನ್ನೆಲೆ ಇರುತ್ತದೆ ಎಂಬುದನ್ನು ಒಪ್ಪಿಕೊಳ್ಳುವುದು.
* **ತ್ಯಾಗವಲ್ಲ, ಸಮನ್ವಯ:** ಇದು ಕೇವಲ ಒಬ್ಬರೇ ಬಿಟ್ಟುಕೊಡುವುದಲ್ಲ, ಇಬ್ಬರೂ ಹೆಜ್ಜೆ ಇಟ್ಟು ನಡುವೆ ಸಂಧಿಸುವುದು.

ಬಾಳು ಎಷ್ಟು ಚಿಕ್ಕದೋ ಅಷ್ಟೇ ಅಮೂಲ್ಯವಾದುದು. ದ್ವೇಷ ಸಾಧಿಸಲು, ಮುನಿಸಿಕೊಂಡು ಕುಳಿತುಕೊಳ್ಳಲು ಇಲ್ಲಿ ಯಾರಿಗೂ ಶಾಶ್ವತವಾದ ಸಮಯವಿಲ್ಲ. ಹೊಂದಾಣಿಕೆ ಎಂಬುದು ನಮಗಾಗಿ ನಾವು ಮಾಡಿಕೊಳ್ಳುವ ಉಪಕಾರ. ಏಕೆಂದರೆ, ಮನಸ್ಸು ಶಾಂತವಾಗಿದ್ದಾಗ ಮಾತ್ರ ಬದುಕು ಸುಂದರವಾಗಿ ಕಾಣಲು ಸಾಧ್ಯ. "ಎಷ್ಟು ಕಷ್ಟವೋ ಹೊಂದಿಕೆಯೆಂಬುದು" ಎಂಬ ಮಾತು ಸತ್ಯವಿರಬಹುದು, ಆದರೆ ಆ ಕಷ್ಟವನ್ನು ದಾಟಿದಾಗಲೇ ಬದುಕಿನ ಸಾರ್ಥಕತೆ ಇರುವುದು.

**ಮನುಷ್ಯ ಸಂಬಂಧಗಳ ಸೇತುವೆ**

ಮಾನವ ಸಂಬಂಧಗಳು ಮಣ್ಣಿನ ಮಡಕೆಯಿದ್ದಂತೆ; ಒಮ್ಮೆ ಒಡೆದರೆ ಅಂಟಿಸುವುದು ಕಷ್ಟ. "ಮೂರು ದಿನದ ಬಾಳಿನಲ್ಲಿ" ನಾವು ಯಾರನ್ನೂ ಅಥವಾ ಏನನ್ನೂ ನಮ್ಮೊಂದಿಗೆ ಕೊಂಡೊಯ್ಯುವುದಿಲ್ಲ. ನಾವು ಬಿಟ್ಟು ಹೋಗುವುದು ಕೇವಲ ನೆನಪುಗಳನ್ನು ಮಾತ್ರ. ಆ ನೆನಪುಗಳು ಮಧುರವಾಗಿರಬೇಕೆಂದರೆ ನಾವು ಬದಲಾಗುತ್ತಿರುವ ಕಾಲ ಮತ್ತು ಮನುಷ್ಯರ ಪ್ರವೃತ್ತಿಗೆ ತಕ್ಕಂತೆ ನಮ್ಮನ್ನು ನಾವು ಸುಧಾರಿಸಿಕೊಳ್ಳಬೇಕು.

ಒಬ್ಬ ವ್ಯಕ್ತಿಯನ್ನು ಅವರು ಹೇಗಿದ್ದಾರೋ ಹಾಗೆಯೇ ಒಪ್ಪಿಕೊಳ್ಳುವುದು (Acceptance)ಆಧ್ಯಾತ್ಮಿಕ ಪ್ರಬುದ್ಧತೆಯ ಪರಾಕಾಷ್ಠೆ. ಎಲ್ಲರೂ ನಮ್ಮಂತೆಯೇ ಇರಬೇಕು ಎಂಬ ಹಠಕ್ಕಿಂತ, ಎಲ್ಲರೂ ಅವರವರ ದಾರಿಯಲ್ಲಿ ಸರಿ ಎಂಬ ವಿಶಾಲ ಮನೋಭಾವ ಹೊಂದಾಣಿಕೆಯನ್ನು ಸುಲಭವಾಗಿಸುತ್ತದೆ.

ಹೊಂದಾಣಿಕೆ ಎನ್ನುವುದು ಬದುಕು ನಮಗೆ ನೀಡುವ ನಿರಂತರ ಪರೀಕ್ಷೆ.

"ಸಮತ್ವಂ ಯೋಗ ಉಚ್ಯತೇ" (ಸಮಚಿತ್ತತೆಯೇ ಯೋಗ) ಎಂದು ಗೀತೆ ಸಾರುತ್ತದೆ.

ಪರಿಸ್ಥಿತಿಗಳು ಮತ್ತು ವ್ಯಕ್ತಿಗಳ ಜೊತೆ ಸಮತೋಲನ ಕಾಯ್ದುಕೊಳ್ಳುವುದೇ ನಿಜವಾದ ಯೋಗ. ಜೀವನದ ಪಯಣದಲ್ಲಿ ಸಣ್ಣಪುಟ್ಟ ಘರ್ಷಣೆಗಳು ಸಹಜ, ಆದರೆ 'ಹೊಂದಿಕೊಳ್ಳುವ' ಪ್ರಯತ್ನವನ್ನು ಮಾತ್ರ ಕೈಬಿಡಬಾರದು. ಏಕೆಂದರೆ, ಕೊನೆಯಲ್ಲಿ ಉಳಿಯುವುದು ನಾವು ಗೆದ್ದ ವಾದಗಳಲ್ಲ, ಬದಲಾಗಿ ನಾವು ಉಳಿಸಿಕೊಂಡ ಮನಸ್ಸುಗಳು ಮತ್ತು ಗಳಿಸಿದ ನೆಮ್ಮದಿ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,